Koravanji

# ಕೊರವಂಜಿ

ಜನವರಿ ೧೯೫೦



★

ಸಂಪಾದಕರು.

ಶ್ರೀ॥ ರಾ. ಶಿ.

ಬರಹಗಾರರು:

ಶ್ರೀ॥ ಕರುಪತಿ
ಶ್ರೀ॥ ಭಾವೀ ಪಿತೃ
ಶ್ರೀ॥ ಅಕ್ರೂರ
ಶ್ರೀ॥ ಕಲಾಕೋವಿ
ಶ್ರೀ॥ ಪ್ರಸಾದ್
ಶ್ರೀ॥ ಟಿ. ಶೇಷು
ಶ್ರೀ॥ ರೇವಣ್ಣ
ಶ್ರೀಮತಿ ಟಿ. ಸುನಂದಮ್ಮ
ಶ್ರೀ॥ ಗಂಗಾಧರ
ಶ್ರೀ॥ ನಾಗಪ್ಪಾಜಿ
ಶ್ರೀ॥ ರುದ್ರಪ್ಪ
ಶ್ರೀ॥ ಇಂದಾಗೆ ಗುಮಾಸ್ತೆ

ಇತ್ಯಾದಿ, ಇತ್ಯಾದಿ.

## ತಿಳಿನಗೆಯ ಮಾಸಪತ್ರಿಕೆ

ಬಿಡಿ ಪ್ರತಿ: ಕೇವಲ ನಾಲ್ಕಾಣೆ.

ಡಿಸೆಂಬರ್



ಎ.ವಿ.ಯಂ.ರವರ

# ಜೀವನ

ತಮಿಳು

ಕುಮಾರಿ ವೈಜಯಂತಿ ಮಾಲ

ಟಿ ಆರ್ ರಾಮಚಂದ್ರನ್

ಕೆ. ಸಾರಂಗಪಾಣಿ. ಎಸ್. ವಿ. ಸಹಸ್ರನಾಮಮ್. ದ್ರೌಪದಿ. ಲ[illegible]-ಪದ್ಮಿನಿ

## ಬೆಂಗಳೂರು

ಸೂಪರ್ . ಮಿನರ್ವ . ನ್ಯೂ[illegible]

ಮೈಸೂರು ರಾಜಕಮಲ್ ಚಿತ್ರಮಂದಿರಗಳಲ್ಲಿ

ಏಕ ಕಾಲದಲ್ಲಿ ಪ್ರದರ್ಶನ

ಎಲ್ಲಾ ವಿಧವಾದ ಫ್ರೀ ಮತ್ತು ಕಾಂಪ್ಲಿಮೆಂಟರಿ ಪಾಸುಗಳನ್ನು ಮೊದಲನೇ ಆರು ವಾರಗಳು ಮನ್ನಾ ಮಾಡಿರುತ್ತೆ.

**a TALLAM** *Release...*


Silky Soft
and luxuriant
HAIR !
RAJA
(TRADE MARK)
HAIROIL
RAJA HAIR OIL.
MANYAM & CO. Bangalore, Madras, Madura, Bombay.

ರಸಿಕರಿಗೆ ಅಚ್ಚುಮೆಚ್ಚಾದುವು

# ಮೈಸೂರು ರೇಷ್ಮೆ ವಸ್ತ್ರಗಳು

ಮಿತವ್ಯಯ - ಹಾಗೂ, ಸುರುಚಿ.

ಮೈಸೂರು ರೇಷ್ಮೆ

ಸಮಾಜದಲ್ಲಿ ಮೇಲ್ಮೆಯ ಕುರುಹು
ಮುತ್ಸಂಜೆಯಲ್ಲಿ ಅನುಪಮವಾದುದು

● ● ●

**ಜಾರ್ಜೆಟ್, ಕ್ರೇಪ್,**

**ಜಾರ್ಜೆಟ್ ಮತ್ತು ಕ್ರೇಪ್ ಸೀರೆಗಳು**

**ಮನಸೆಳೆವ ಮಾದರಿಗಳು**

**ಇಂದಿನ ಅಂದದ ರಂಗುಗಳು.**

**ಸರ್ಕಾರಿ ರೇಷ್ಮೆ ನೇಯುವ ಕಾರ್ಖಾನೆ,**

**ಮೈಸೂರು**

# "ನಾನು ಪ್ರತಿನಿತ್ಯವೂ ಟೀ ಕುಡಿಯುತ್ತೇನೆ

ಕಡಿಮೆ ಪಕ್ಷ ಎರಡು ಸಲವಾದರೂ ತಪ್ಪಿಸುವುದೇ ಇಲ್ಲ. ಅದು ನನಗೆ ನವಚೈತನ್ಯವನ್ನು ಪ್ರಸಾದಿಸುತ್ತದೆ. ಆರೋಗ್ಯ ವಿಷಯದಲ್ಲಿ ಅದರಿಂದ ಕೆಡುಕಾದ ಸಂದರ್ಭವನ್ನೇ ನಾನರಿಯೆ ಅಷ್ಟೇ ಅಲ್ಲ; ಬೆಳಗ್ಗೆ ಒಂದು ಬಟ್ಟಲು ಚಾ ಕುಡಿಯುವುದರಿಂದ ಉಲ್ಲಾಸವು ಮೂಡುವುದು. ಅಂದಿನ ಕಾರ್ಯಗಳನ್ನಾರಂಭಿಸಲು ಅವಶ್ಯವಾದ ಶಕ್ತ್ಯುತ್ಸಾಹಗಳನ್ನು ಅದು ಪ್ರಸಾದಿಸುವುದು."

(ದಸ್ಕತ್ತು) ಎಂ. ಎನ್. ಸಾಹಾ



# ಟೀ




## ಆವೇಶಸ್ಫೂರ್ತಿಗೆ

ಡಾ॥ ಮೇಘನಾಥ ಸಾಹಾ, ಡಿ ಎಸ್‌ಸಿ., ಎಫ್ ಆರ್ ಎಸ್ ರವರು ಪಲೀತ್ ಪ್ರೊಫೆಸರು ಮತ್ತು ಕಲಕತ್ತಾ ವಿಶ್ವವಿದ್ಯಾನಿಲಯದ ಫಿಜಿಕ್ಸ್ ಶಾಖೆಗೆ ಅಧ್ಯಕ್ಷರು. ಅವರು ಭಾರತ ವರ್ಷದ ವಿಖ್ಯಾತ ವೈಜ್ಞಾನಿಕ ಶಾಸ್ತ್ರ ನಿಪುಣರಲ್ಲೊಬ್ಬರು. ನ್ಯೂಕ್ಲಿಯರ್ ಫಿಜಿಕ್ಸನಬಗ್ಗೆ ಅವರು ಬರೆದ ಗ್ರಂಥಕ್ಕಾಗಿ ಅಂತರ್ಜಾತೀಯ ವಿಖ್ಯಾತಿಯನ್ನು ಪಡೆದರು. ಸ್ಟೆಲ್ಲರ್‌ಸ್ಪೆಕ್ಟ್ರ ಸಿದ್ಧಾಂತ ವಿಷಯಕವಾಗಿ ಪ್ರತ್ಯೇಕ ಪ್ರಸಿದ್ಧರು. ಇದರ ದೆಸೆಯಿಂದಲೇ ಅವರಿಗೆ ರಾಯಲ್ ಸೊಸೈಟೀ ಫೆಲೋಶಿಪ್ ಲಭಿಸಿತು. 1945ರಲ್ಲಿ ನಡೆದ ರಷ್ಯಾ ವೈಜ್ಞಾನಿಕ ಪರಿಷತ್ತಿನ 220ನೇ ವಾರ್ಷಿಕ ಸಮಾರಂಭಕ್ಕೆ ಅವರು ಭಾರತ ವರ್ಷಕ್ಕೆ ಪ್ರತಿನಿಧಿಯಾಗಿ ಹಾಜರಾಗಿದ್ದರು.

★

ಸೆಂಟ್ರಲ್ ಟೀ ಬೋರ್ಡ್
ಅವರಿಂದ ಪ್ರಚುರಿಸಲ್ಪಟ್ಟಿದೆ.



ಸಂಪುಟ ೯ | ಜನವರಿ ೧೯೫೦ | ಸಂಚಿಕೆ ೧೦

# ಕುಹಕ್ಕಿಡಿಗಳು

—o—

ಧನುರ್ಮಾಸ ! ಛಳಿ ಹೆಚ್ಚು !

ಅದಕ್ಕೇ ಈಗ ಅಖಂಡ ಕರ್ಣಾಟಕದ ನಿರ್ಮಾಣ ಬೇಡ ! ಅಂತ ಬಿಸಿ ಬಿಸಿ ಸುದ್ದಿ ಹೊರಬಿದ್ದಿದೆ.

* * *

ಮೊನ್ನೆ ನಡೆದ ಗಣಿತ ಶಾಸ್ತ್ರ ಸಮ್ಮೇಳನದ ಹೊರಗಡೆ ನೆರೆದಿದ್ದ ಜನರೆಲ್ಲಾ ನಿದ್ರೆ ಹೋಗುತ್ತಿದ್ದರಂತೆ !

—ಸ್ವಾಭಾವಿಕ ಅಲ್ಲವೇ !!

* * *

ಮುಕ್ಕಾಲು ಪಾಲು ಮುಸಲ್ಮಾನೀ ಆದ ಇಂಡೋನೇಷ್ಯಾದ ಸ್ವಾತಂತ್ರ್ಯ ಇಷ್ಟುಬೇಗ ಲಭಿಸಿದುದಕ್ಕೆ ಪಂ| ನೆಹ್ರೂ ಅವರು ಮುಖ್ಯ ಕಾರಣ—ಪತ್ರಿಕೆ.

—ಮುಕ್ಕಾಲು ಮೂರುವೀಸೆ ಪಾಲು ಮುಸಲ್ಮಾನಿ ಪಾಕಿಸ್ಥಾನಕ್ಕೆ ಪಂ| ರ ಗುರು ಮಹಾತ್ಮಜೀಯವರು ಮುಖ್ಯ ಕಾರಣ ಎಂಬುದು ಸಾಕಷ್ಟು ಜನರಿಗೆ ತಿಳಿಯದು, ಅಲ್ಲವೆ ?

* * *

ರಷ್ಯಾದಲ್ಲಿ "ಐದು ವರ್ಷದ" ಯೋಜನೆ ಹೂಡಿ ಬಹಳ ಪ್ರಗತಿ ಸಾಧಿಸಿದರಂತೆ.

—ನಮ್ಮ ಮಂತ್ರಿಗಳು "ಚುನಾವಣೆ" ಯೋಜನೆ ಹೂಡಿ ಪ್ರಗತಿ ಸಾಧಿಸುತ್ತಿದ್ದಾರೆ ಎಂಬುವುದು ಸುಳ್ಳು.

* * *

ಇಂಗ್ಲೆಂಡಿನಲ್ಲಿ "Out" ಅಂತ ಬೋರ್ಡು ಹಾಕಿದರೆ ಆತ ಮನೆಯಲ್ಲಿಲ್ಲ ಅಂತ ಅರ್ಥವಂತೆ.

—ನಮ್ಮೂರಿನಲ್ಲಿ ಆತನಿಗೆ ರಾಜಕೀಯ ಖಾಯಿಲೆ ಎಂದು ಅರ್ಥ ಎನ್ನುವುದು ಕುಹಕ ಅಷ್ಟೆ !

* * *

ಕಾರ್ಮಿಕರ ಕೇಳಿಕೆಗಳನ್ನು ಕೇಳಿದ ಹಲವಾರು ಕಾರ್ಖಾನೆಯ ಮಾಲೀಕರು ಈಗಲೇ ಈ ಕಾರ್ಖಾನೆಗಳ ರಾಷ್ಟ್ರೀಕರಣವಾಗಬೇಕು ಎಂದು ಚಳುವಳಿ ಹೂಡಿದ್ದಾರಂತೆ.

* * *

ಈ ಸಾರಿ ಆನೆಗಳನ್ನು ಹಿಡಿಯುವ ಖೆಡ್ಡಾಕ್ಕೆ—ಸರದಾರರ ಬಲಗೈ ಮೆನನರು ಪ್ರೇಕ್ಷಕರಾಗಿ ಮಾತ್ರ ಬಂದಿದ್ದರಂತೆ.

—ಶಿಕಾರಿಗಲ್ಲವಂತೆ.

* * *

ಈ ಸಾರಿ ಕ್ರಿಸ್‌ಮಸ್ ಹಬ್ಬವನ್ನು ಆಚರಿಸಲು ಸಾಕಷ್ಟು ರಜ ದೊರಕಲಿಲ್ಲ ಎಂದು ಹಲವಾರು ಹಿಂದುಗಳು ಆಕ್ಷೇಪಣೆ ಮಾಡುತ್ತಿದ್ದರಂತೆ.

* * *

ಗವರ್ನರ ಸತ್ಕಾರ ಕೂಟದಲ್ಲಿ ಬೆಲ್ಲದ ಕಾಫಿ !

ಶಿರೋನಾಮ.

ಅದಲ್ಲ ಮುಖ್ಯ !! ಅವರ ಮನೆಯ ಕಾಫೀಗೆ ಬೆಲ್ಲವೇ ಸಕ್ಕರೆಯೋ ?

* * *

ಸ್ವಾತಂತ್ರ್ಯ ಬಂದ ಮೇಲೆ ಅಂಚೆ ಇಲಾಖೆಯವರು ಹೊಸ ನಮೂನೆ "ಸ್ಟಾಂಪು" ಗಳನ್ನು ಉಪಯೋಗಿಸುತ್ತಾರಲ್ಲಾ.

—ಹಾಗೆ ನಮ್ಮ ಮಠಾಧಿಪತಿಗಳೂ ಮಾಡಬಾರದೇ ? ಎಂದೊಬ್ಬರು ಪ್ರಶ್ನಿಸಿದ್ದಾರೆ.

* * *

ಖೆಡ್ಡಾ ಆನೆಗಳ ಮುಖಂಡರು, ಪ್ರೇಕ್ಷಕರಾಗಿ ಬಂದ ಕಾರ್ಮಿಕ ಸಮ್ಮೇಳನ ಸದಸ್ಯರಿಗೆ ತಮ್ಮ ಅಹವಾಲು ಹೇಳಿಕೊಂಡರು ಎಂಬುವುದು ಸುಳ್ಳಂತೆ.

* * *

# ಉರಿಗಾಳು

"ಮೈಸೂರಿನ ನಲವತ್ತು ಮುಖಂಡರು ಸರ್ದಾರ್ ಪಟೇಲರಿಗೆ ತಂತಿ ಕಳುಹಿಸಿದರು" (ವರದಿ) ಆಡಳಿತ ಬಿಗಿ ಮಾಡಲೆಂದೋ ?

*   *   *

"ಕರ್ನಾಟಕದ ರಾಜಿನಾಮೆ ಪ್ರಕರಣ"........ನಾಟಕವಾಗಿಯೇ ಕೊನೆ ಗಂಡಿತು.

*   *   *

"ಸ್ಟಾಲಿನ್ನರ ಕಂಚಿನ ಗೊಂಬೆಗಳನ್ನು ಇಲ ಪರ್ವತ ಶಿಖರಗಳ ಮೇಲಿರಿಸ ಲಾಯಿತು"........ದೂರದ ಬೆಟ್ಟ, ಕೆಂಪಗೆ.

*   *   *

ಸಂಗೀತ ಜ್ಞಾನ ಜನ ಸಾಮಾನ್ಯರಲ್ಲಿ ಹೆಚ್ಚುತ್ತಿದೆಯಾದರೂ, ಸಂಗೀತ ಕಚೇರಿಗಳು ಇನ್ನೂ ಜರುಗುತ್ತಿರುವುದೇ ಆಶ್ಚರ್ಯ.

*   *   *

"ಈ ಸಮಸ್ಯೆಯ ಪರಿಹಾರಕ್ಕಾಗಿ ನನ್ನ ಬುದ್ಧಿಗೆ ತೋಚಿದ್ದನ್ನು ನಾನು ಹೇಳುತ್ತೇನೆ". ಎನ್ನುತ್ತ, ಒಬ್ಬರು ಮಂತ್ರಿಗಳು ಮಾತನ್ನೇ ನಿಲ್ಲಿಸಿಬಿಟ್ಟ ರಂತೆ.

*   *   *

"ನೀವು ಹೇಗ್ರಿ ಮಂತ್ರಿಯಾದಿರಿ ? ಎಂದು ಜನ ನನ್ನನ್ನು ಸದಾ ಕೇಳು ವುದಕ್ಕಿಂತ, ನೀವು ಹೇಗ್ರಿ ಮಂತ್ರಿಯಾಗಲಿಲ್ಲ ? ಎಂದು ಕೇಳುತ್ತಿರುವುದೇ ಕಿವಿಗೆ ಇಂಪು"—ಎಂದು ಒಬ್ಬರು ನಾಯಕರು ಮೊನ್ನೆ ಹೇಳಿದರಂತೆ.

*   *   *

"ಇಡ್ಲಿ ದೋಸೆ ಮಾಡಿದ್ದಕ್ಕೆ ಶಿಕ್ಷೆ" ಎಂಬ ಸುದ್ದಿಯನ್ನು ಓದಿದ ಪ್ರತಿ ಯೊಬ್ಬರು, ತನ್ನ ಹೆಂಡತಿ ಮನೆಯಲ್ಲಿ ಮಾಡಿದ ಅದೇ ಪದಾರ್ಥಗಳ ಸ್ಯಾಂಪ ಲ್ಲುಗಳ ಸಹಿತ, ಪೋಲೀಸರಿಗೆ ದೂರು ಕೊಟ್ಟು ಹೀಗೆ ಮಾಡಿದರೆ ಶಿಕ್ಷಿಸಬಾರ ದೇಕೆ, ಎಂದು ಕೇಳಿರುವರು.

*   *   *

"ರಾಜಾಜಿಯ ಎಡ ಕಿವಿ ಬಲು ಮಂದ" (ವರದಿ) ಆದ್ದರಿಂದಲೇ. ಅವರ ಬಲ ಬಲು ಜೋರು.

*            *            *

ರೈಲ್ವೆ ಪ್ರಯಾಣ ಮಾಡುವವರು ಇನ್ನುಮುಂದೆ ತಮ್ಮ ಅಕ್ಕಪಕ್ಕದವರ ಅನುಮತಿಯನ್ನು ಪಡೆದು ಧೂಮಪಾನ ಮಾಡಬೇಕು, ಎಂಥು ಸರ್ಕಾರದ ಆಜ್ಞೆಯಾಗಿದೆ.........

"ಅಕ್ಕಪಕ್ಕದವರಿಂದಲೇ ಬೀಡಿ ಸಿಗರೇಟುಗಳನ್ನು ಪಡೆಯುತ್ತಿರುವ ನಮ್ಮಂಥವರಿಗೆ ಈ ಆಜ್ಞೆ ಅನ್ವಯಿಸಲಾರದು.

*            *            *

"ಮಹಾತ್ಮಾ ಗಾಂಧಿ ಮತ್ತು ಕಸ್ತೂರಿಬಾ ಸ್ಮಾರಕ ಬ್ಯಾಸ್ಕೆಟ್ ಬಾಲ್, ತ್ರೋಬಾಲ್, ಹಾಕಿ, ಫುಟ್‌ಬಾಲ್ ಪಂದ್ಯಗಳು"..... ಸದರಿ ಆಟಗಳಲ್ಲಿ ಅವರು ಎಂದು ಕೀರ್ತಿ ಪಡೆದರೋ, ನಮಗೆ ತಿಳಿಯದು.

*            *            *

"ಕಾಳಸಂತೆಯವರಿಗೆ ಮರಣ ದಂಡನೆಯನ್ನು ವಿಧಿಸಬೇಕು" (ಯು. ಪಿ. ನ್ಯಾಯವಿಧಾಯಕ ಸಭೆ). ದೇವರು ಅವರಿಗೆ ಆ ದಂಡನೆಯನ್ನು ವಿಧಿಸಿದಾನೆ. ಆದ್ದರಿಂದಲೇ ಅವರು ಅದಷ್ಟು ಬೇಗ ಹಣಗಳಿಸಲು ಶ್ರಮಿಸುತ್ತಿರುವುದು.

*            *            *

ಮಹಾತ್ಮಾ ಗಾಂಧಿ ಸ್ಮಾರಕ ನಿಧಿಗೆ ವಸೂಲು ಮಾಡಿದ ಹಣವನ್ನು ಕೊಡದಿದ್ದರೂ, ರಶೀತಿ ಪುಸ್ತಕಗಳನ್ನಾದರೂ ಕೊಟ್ಟರೆ, ಅವುಗಳನ್ನು ತೂಕ ಮಾಡಿ ಮಾರಿ, ಒಂದಿಷ್ಟು ಹಣ ವಸೂಲುಮಾಡಬಹುದೆಂದು ಮುಖಂಡರೊಬ್ಬರು ಕೇಳಿಕೊಂಡಿದಾರೆ.


*            *            *

ಸಾಧುಗಳನ್ನೂ ಭಿಕ್ಷುಕರೆಂದೇ ಪರಿಗಣಿಸಿ, ಕರೆದೊಯ್ಯಲಾಗುವುದು. (ಬೊಂಬಾಯಿ ಸರ್ಕಾರದ ನಿರ್ಣಯ) ಸಾಧುಪ್ರಾಣಿಗಳನ್ನು ಕಂಡರೆ, ಸರ್ಕಾರಕ್ಕೂ ಕರುಣೆ ಇಲ್ಲ.

*            *            *

"ಕಾಂಗ್ರೆಸ್ಸಿಗರಿಗೆ ರಾಷ್ಟ್ರಾಧ್ಯಕ್ಷರ ಎಚ್ಚರಿಕೆ" ಹಿಂದಿನ ಸ್ವಾರ್ಥತ್ಯಾಗವನ್ನೆ ಕೊಚ್ಚಿಕೊಳ್ಳಬೇಡಿ"....... ಕೊಚ್ಚಿಹೋದದ್ದನ್ನು ಕೊಚ್ಚಿಕೊಂಡರೆ ತಪ್ಪೇನು?

*            *            *




ಈ ಸೀಸದ ಕಡ್ಡೀನೂ ಸ್ವಲ್ಪ ಚೀಪಿ ಕೊಡೊ !



ಚುನಾವಣೆ ಕಾಲ ಬಂತು ಅಂತ ಈ ಟೋಪಿ ಮಾರುಕ್ಕೆ
ಸುರು ಮಾಡಿದರೂ ಯಾರೂ ಕೊಳ್ಳೋದೇ ಇಲ್ಲವಲ್ಲ !

# ಸುಣ್ಣ ತೊಡೆಸುವುದು

ನಮ್ಮನೆ ಹೊರಗೋಡೆ, ರಸ್ತೆ ಅಂಚಿನಲ್ಲೇ ಇದೆ. ಅಂದರೆ ಪೇಟೆ ಮನೆಗಳು ಗೊತ್ತಿಲ್ಲವೇ! ಕಾಂಪೌಂಡಿಲ್ಲ! ಏನೂ ಇಲ್ಲ! ಅಂತಹದು. ಅದು ಬಣ್ಣಗೆಟ್ಟು, ಕುಲಗೆಟ್ಟುಹೋಗಿತ್ತು. ಆ ದಿನ ಕಛೇರಿಯಿಂದ ಮನೆಗೆ ಬರುವಾಗ ಆ ಗೋಡೆ ನೋಡಿಕೊಂಡೇ, ಕೊರಗಿಕೊಂಡೇ, ಒಳಕ್ಕೆ ಹೋದೆ. ತಲೆ ಸಿಂಬಿಯನ್ನ ಗೂಟಕ್ಕೆ ತಗುಲಿಸಿ, ಅಂಗಿಯನ್ನು ಬಾಗಿಲಿಗೆ ತಗಲು ಹಾಕಿ, ಸುತ್ತಿದ ಹಾಸಿಗೆ ಮೇಲೆ ಕುಳಿತು ಕೂಗಿದೆ "ಲೇ! ಒಂದು ಲೋಟಾ ಕುಡಿಯೋ ನೀರು ತೊಗೊಂಬಾರೇ" ಅಂತ.

(ನಮ್ಮನೆ ಭಾವೀಲಿ ಉಪ್ಪು ನೀರು.—ಅದಕ್ಕೇ ನಮ್ಮನೇಲಿ ಸರ್ಕಾರದಲ್ಲಿದ್ದ ಹಾಗೆ ನೀರಿಗೆ ಎರಡು ಜಾತಿಗಳಿವೆ. ದಾಹವಾದಾಗ ಒಂದು—ಕೊಳೆಯಾದಾಗ ಇನ್ನೊಂದು ಅಂತ).

ಆಕೆ ಬಂದಳು—ಬರುತ್ತಾ ತಂದಳು—ಒಂದು ಲೋಟಾ ನೀರು ಒಂದು ತಟ್ಟೆ ಅವರೇಕಾಯಿ ಉಪ್ಪಿಟ್ಟು.—ಬಾಯಿಬಿಟ್ಟು ಕೇಳಿದರೂ ತಿಂಡಿ ಮಾಡದೇ ಇದ್ದವಳು ಇವತ್ತೇನು ಬಂತು ಆವಳೇ ಮಾಡಿದ್ದಾಳೆ. ಇವಳ ತಕ್ಕು ಏನಾದರೂ ಮನೇಗೆ ಬರೋ ವಾಯಿದೆಯೋ ಎಂದು ಯೋಚನೆಗೇ ಇಟ್ಟುಕೊಂಡಿತು. ಆದರೂ ಅವರೇಕಾಯಿ ಉಪ್ಪಿಟ್ಟು ನಾಲಿಗೆಯನ್ನು ಕರೆಯಿತು. ನಾಲಿಗೆಗೆ ಮಾತನಾಡಲು ವ್ಯವಧಾನವೇ ಇತ್ತಿಲ್ಲ.

ಆಗಂದಳು ನನ್ನ ಅರ್ಧಾಂಗಿ—ಅರ್ಧಾಂಗಿ ಅಲ್ಲ—ಅರ್ಧ ಷರಟು—ಏಕೆಂದರೆ, ಹರಿದ ಸೀರೆಗಳೆಲ್ಲಾ ನನ್ನ ಷರ್ಟಾಗಿ ಮಾರ್ಪಾಡಾಗುತ್ತಿದೆ. ಕೇಳಿದವರಿಗೆ ಅಮೇರಿಕನ್ ಫ್ಯಾರ್ಷ ಎನ್ನುವ ಚತುರತೆ ಇದೆ.

"ಅಲ್ಲಾ ಅಂದ್ರೆ, ನಮ್ಮ ಸೋಮು ಹೆಂಡತಿ ಮೋಟಾರಿನಲ್ಲಿ ಮಧ್ಯಾಹ್ನ ಬಂದಿದ್ದಳು, ಬಸವನಗುಡಿಯಿಂದ. ಅವಳ ಮಗು ಹುಟ್ಟಿದ ಹಬ್ಬಕ್ಕೆ ನನ್ನನ್ನ ಕರೆಯೋಣ ಅಂತ. ಅವಳಂದಳು ಅಂದರೆ! ಇದೇನೆ! ಸ್ವಂತ ಮನೆ, ಚೆನ್ನಾಗಿಟ್ಟುಕೊಳ್ಳಬಾರದೆ, ಸುಣ್ಣ ತೊಡಿಸಿ ಎಷ್ಟು ವರ್ಷ ಆಯಿತೇ? ನಿನ್ನ ಮದುವೇಲಿ ಸುಣ್ಣ ತೊಡಿಸಿದ್ದು 'ಅಂತ ಕಾಣುತ್ತೆ" ಅಂತಂದಳು. ಅವಳನ್ನ ಕಾರಿಗೆ ಬಿಟ್ಟು ಬರುವಾಗ ಗೋಡೆ ನೋಡಿದೆ ಅಂದ್ರೆ. ನಮ್ಮಪ್ಪ ನನ್ನ ಮದುವೇಲಿ, ಸುಣ್ಣ ತೊಡಿಸಿ ನಿಮಗೆ ಧಾರೆ ಎರೆದ ಮೇಲೆ ತಿರುಗಿ ಆ ಗೋಡೆ ಸುಣ್ಣಾನೂ ಕಂಡಿಲ್ಲ. ಬಣ್ಣಾನೂ ಕಂಡಿಲ್ಲ. ಕಂಡವರೆದುರಿಗೆ ನಾಚಿಕೆ ಆಗುತ್ತೆ ಅಂದರೆ. ಈ ಸಾರ್ತಿ ಉಗಾದಿ ಹೊತ್ತಿಗಾದರೂ ಸುಣ್ಣ ಬಣ್ಣ ಮಾಡಿಸಬೇಕು ಅಂದರೆ" ಅಂದಳು.

ಆಗ ನನಗೆ ಅರಿವು. ಅವರೆಕಾಯಿ ಉಪ್ಪಿಟ್ಟಿನ ಹಿನ್ನೆಲೆ ಅರ್ಥವಾಯಿತು. ಆದರೆ, ಅದೇ ಉಪ್ಪಿಟ್ಟೇ ನನ್ನ ಹೊಟ್ಟೆ ಸೇರಿ ಕುಹಕವನ್ನೆಲ್ಲಾ ಭಸ್ಮಮಾಡಿತ್ತು. ಅದೇಕೋ ಒಂದು ತರಹ ಸುಷುಪ್ತಾವಸ್ಥೆ. ಎಚ್ಚರವೂ ಇಲ್ಲ. ನಿದ್ರೆಯೂ ಇಲ್ಲ. ಈಗಿನ ಕಾಲದ ಮಂತ್ರಿಗಳಾವಸ್ಥೆ ಇದೇವೆ ಅನ್ನೋ ಧೈರ್ಯವೂ ಇಲ್ಲ ಹೋದೆವು ಅನ್ನೋ ಹಿಗ್ಗೂ ಇಲ್ಲ ಅವಳ ಮಾತೆಲ್ಲಾ ಕೇಳಿದೆ ನಗುನಗುತ್ತಾ ಹೇಳಿದೆ.

"ಎಲೈ ಕಣ್ಮಣಿಯೆ ಕೇಳ್—ಆ ಹೊರಗೋಡೆ ನೋಡಿರುವೆಯಾ! ಜೈಪ್ರಕಾಶ್ ನಾರಾಯಣ್ ಬಂದರು ಅಂತ ಒಂದು ಕಡೆ ಅವರ ಹೆಸರನ್ನು ಇದ್ದಿಲಿನಲ್ಲಿ ಬರೆದಿದ್ದಾರೆ. ಅವರಿಗೆ ಪೌರಸ್ವಾಗತ ನಮ್ಮ ಹೊರಗೋಡೆಯ ಮೇಲೇ! ಇನ್ನೊಂದು ಕಡೆ "ಗುರೂಜಿಯವರು ನಿರ್ದೋಷಿ" ಎಂಬ ಶಿರೋನಾಮೆ—ಮತ್ತೊಂದೆಡೆ ಸುತ್ತಿಗೆ ಕುಡುಗೋಲನ್ನು ಕೆಮ್ಮಣ್ಣಿನಲ್ಲಿ ಬಳಿದಿದ್ದಾರೆ—ಪ್ರಾಯಶಃ ಸ್ಟಾಲಿನ್ನಿನ ಜನ್ಮ ದಿವಸದ ನೆನಪಿಗೆ ಅಂತ. ಸಣ್ಣ ಅಕ್ಷರದ ವೇದ ವಾಕ್ಯಗಳು ಆ ಗೋಡೆ ಮೇಲೆ ಬೇಕಾದಷ್ಟಿವೆ. ಮುಂದಕ್ಕೆ ಯಾವನೋ ಪ್ರಾಕ್ತನ ವಿಮರ್ಶಕ ವಿಚಕ್ಷಣ ಅವನ್ನು ಓದಿ ಅರ್ಥಮಾಡಿಕೊಂಡು ತನ್ನ ಹೊಟ್ಟೆಹೊರೆದುಕೊಳ್ಳುತ್ತಾನೆ.

ಅಂಥಾ ಹಿರಿಮೆಯ ಗೋಡೆಗೆ ನಾನು ತೆಳ್ಳಗೆ ಬೆಳ್ಳಗೆ ಸುಣ್ಣ ಹೊಡಿಸಿದರೆ, ಅದೂ ಉಗಾದಿಯ ಹೊತ್ತಿಗೆ—ಅದಕ್ಕೆ ಉಳಿಗಾಲವುಂಟೆ. ಉಗಾದಿ ಹೊತ್ತಿಗೆ ನಮ್ಮೂರಿನಲ್ಲಿ ಪೌರಸಭಾ ಚುನಾವಣೆಗಳು. ಜ್ಞಾಪಕವಿದೆಯೋ!—

ಈಗಾದರೂ ಗೋಡೆಗೆ ಜೈಪ್ರಕಾಶ್, ಗುರೂಜಿ, ಸ್ಟಾಲಿನ್ ಇವರ ಗುರುತುಗಳಿವೆ. ಆಗ್ಗ್ಯೆ ಬಿಳಿ ಗೋಡೆಯನ್ನು ಕಂಡರೆ ಪೌರಸಭಾ ಕಕ್ಷಿ ಪ್ರತಿ ಕಕ್ಷಿಗಳು ಸುಮ್ಮಗಿರುತ್ತಾರೆಯೇ—ತಮ್ಮ ತಮ್ಮ ಗುರುತುಗಳನ್ನು—ಒಂಟೆ, ಆನೆ, ಹುಲಿ, ಸಿಂಹ, ನರಿ, ಕರಡಿ, ಚರಕ, ಕ್ಷೌರಕ ಇತ್ಯಾದಿ ಬರೆಯದೇ ಬಿಡುತ್ತಾರೆಯೇ? ಆ ಅವಲಕ್ಷಣ ಒಂಟೆ, ಕರಡಿಗಳಿಗಿಂತ ಈ ಕುಡುಗೋಲು, ಸುತ್ತಿಗೆ—ಕಾವೀಬಣ್ಣ—ಸರಿಸಮಾನತೆ—ಇವು ಶ್ರೇಷ್ಠವಲ್ಲವೇ?

"ಕೇಳ್! ನನ್ನ ಕನ್ಮಣಿಯೇ! ಕೇಳ್. ಇಂತಿರ್ಪ ಸೊಬಗಿನ ಕುಡ್ಯಮಂ ಸುಣವಂ ತೊಡಿಸಿ, ಮುಂಬರ್ಪ ಕಾಡುಮೃಗಗಳ ಚಿತ್ರಮಂ ರಚಿಸಲ್ಕೆ ನಿನ ಮನ ಒಪ್ಪುದೇಂ! ಎನ್ನ ಮನ ಒಪ್ಪುದೇಂ! ಈ ಆಯ್ಕೆಗಳೆಲ್ಲಂ ತೀರಲಿ! ಪ್ರಪೌರ ಸಭೆಯದು ರಚಿತಮಾಗಲಿ. ಅಂತಾದೊಡಂ ನಾಂ ಕುಡ್ಯಕೆ ಸುಣ್ಣಮಂ ನಿನಗೆ ಉಡಲು ಸೀರೆಯುಂ, ಕುಡಿಯಲು ನೊರೆವಾಲಂ, ಕುಣಿಯಲು ಅವಳಿ ಗೆಜ್ಜೆಯುಮಂ, ಸಮರ್ಪಿಸುವೆಂ.

ಕೇಳ್ ಕಣ್ಮಣಿ ಈ ಸಾಹಸ ಭೀಮ ಪ್ರತಿಜ್ಞೆಯಂ!"

ಎಂದಂದೆನೆಂದು ಕನವರಿಸಿದೆ.

—ಕರುಪತಿ.

# ನಗರ ನಿರ್ಮಲೀಕರಣ

---

ಇದೊಂದು ಹೊಸ ಖಾಯಿಲೆ ಶುರುವಾಗಿದೆ ನಮ್ಮೂರಿನಲ್ಲಿ. ಇಂತಿಂತಹ ದಿನ ಇಂತಿಂತಹ ಪ್ರದೇಶಗಳಲ್ಲಿ ಅತಿ ಚುರುಕಾಗಿ ನಿರ್ಮಲೀಕರಣ ಮಾಡುತ್ತೇವೆ ಅಂತ ಡಂಗುರ ಹೊಡಿಸಿ ಆ ಕೆಲಸ ಮಾಡುತ್ತಾರೆ. ಚೆನ್ನಾಗಿ ಮಾಡುತ್ತಾರೆ. ಆದರೆ ಮಾರನೆಯ ದಿನ ಆ ಪ್ರದೇಶದಲ್ಲಿ ಹೋಗಲಿಕ್ಕೇ ಆಗದು. ಒಂದೇ ದಿವಸದಲ್ಲಿ ನಮ್ಮೂರಿನವರು ಹಿಂದಿನ ಸ್ಥಿತಿಗೆ ತಂದುಬಿಡುತ್ತಾರೆ. ನಮ್ಮವರೆಲ್ಲಾ ಈ ವಿಚಾರದಲ್ಲಿ ಕಂದಾಚಾರಿಗಳು.

ಇನ್ನೇನು ಮಾಡಬೇಕು ಮತ್ತೆ! ಅಂತೀರಾ!

ನಾನಾಗಿದ್ದರೆ, ಇಂತಹ ದಿವಸ ಇಂತಹ ಪ್ರದೇಶಗಳನ್ನು ಮೊದಲಿನಂತೆಯೇ ಮಾಡುತ್ತೇವೆ ಎಂದು ಡಂಗುರ ಸಾರಿಸಿ, ಆ ದಿನ ಬೆಳಿಗ್ಗೆ ಚುರುಕಾಗಿ ಆ ಪ್ರದೇಶದ ರಸ್ತೆ ರಸ್ತೆಗಳಲ್ಲಿಯೂ ನಿಯಮದಂತೆ ಎಂಜಲೆಲೆಗಳನ್ನೂ ಬೂದಿ ಇತ್ಯಾದಿಗಳನ್ನೂ ಅಲ್ಲಿರುವ "ಡಸ್ಟ್‌ಬಿನ್" ಸುತ್ತಲೂ ಹಾಕುವುದು. ಲಾರಿಗಳಲ್ಲಿ ಕೊಳೆ ನೀರು ತಂದು ಚರಂಡಿಯ ಎರಡು ಬಾಯಿಗಳನ್ನೂ ಮುಚ್ಚಿ ನೀರು ತುಂಬಿಸುವುದು. ರಸ್ತೆಯಲ್ಲೆಲ್ಲಾ ಘಮ ಘಮಿಸುವಂತೆ ಕೃತಕ ಸ್ಯಾನಿಟರಿ ವಾಸನೆಗಳನ್ನು ಹರಡುವುದು.

ಹೀಗೆ ಒಂದು ದಿನ, ತಿಂಗಳಿಗೊಂದು ದಿನ ಮಾಡಿದರೆ, ಜನರೆಲ್ಲಾ ಓಹೋ! ಈ ರಸ್ತೆಯಲ್ಲಿ ಇನ್ನು ಎಂಜಲೆಲೆಗೆ ಸ್ಥಳವಿಲ್ಲ. ಇನ್ನು ಬೂದಿ, ಇಜ್ಜಲ ತುಂಡಿಗೆ ಎಡೆಯಿಲ್ಲ. ಇನ್ನು ಬಚ್ಚಲ ನೀರನ್ನು ಬೀದಿ ಚರಂಡಿಗೆ ಬಿಡಲಾಗುವುದಿಲ್ಲ. ಎಳೆಯ ಮಕ್ಕಳನ್ನು ರಸ್ತೆಗೆ ಇನ್ನು ಮೇಲೆ ಬಿಡಬಾರದು, ಎಂಬುದನ್ನಾದರೂ ಕಲಿತು ಸ್ವಲ್ಪ ಚೊಕ್ಕಟವಾಗಿಡುವರು. ಆರೋಗ್ಯ ಜೀವನದ ನಿಯಮಗಳನ್ನು ಅಭ್ಯಾಸ ಮಾಡಬಹುದು.

ಅಲ್ಲಾ! ಮಾಡುತ್ತಾರೇಂತ ಅಲ್ಲ! ಹೇಗೂ ಕಂದಾಚಾರಿಗಳು. ಆದರೂ ಮಾಡುವ ಸಂಭವವುಂಟು.

ಅದು ಬಿಟ್ಟು ಚುರುಕಾಗಿ ಚೊಕ್ಕಟ ಮಾಡಿದರೆ, ನಾಯಿಬಾಲ ನೆಟ್ಟಗೆ ನಿಲ್ಲುತ್ತೆಯೇ! ಡೊಂಕೇ! ಅಲ್ಲವೆ. ಅದಕ್ಕೆ ಡೊಂಕು ಕಟ್ಟಿ ಕಟ್ಟಿದರೆ ನೆಟ್ಟಗಾಗಬಹುದೇನೋ! ಅಲ್ಲವೇ.

—ಭಾವೀ ಪಿತೃ.

# ಕೊರವನ ಸಿಂಹಾವಲೋಕನ

—

ತಲೆ ಕೆರೆದುಕೊಳ್ಳುತ್ತಾ ಕೊರವ ಬಂದು ಕುಳಿತ ನಮ್ಮ ಕ್ಲಬ್ಬಿನ ವರಾಂಡದಲ್ಲಿ. ನೋಡಿದರೆ ತಲೇನ! ಗೆಜ್ಜಲು ತಿಂದ ಹಲಗೆ ಹಾಗಿತ್ತು ತಲೆ.

"ಎಲ್ಲಯ್ಯಾ 'ಕ್ರಾಪ್' ಮಾಡಿಸಿಕೊಂಡೆ! ಯಾವನೋ ಎಳೇ ಹುಡುಗ ತಲೆ ಮೇಲೆ ಮೆಷಿನ್ ಆಡಿಸಿದಂತಿದೆ" ಎಂದೆ.

"ಅದಕ್ಕೇ ನಾನು ಹೇಳೋದು" ಎಂದು ಕೊರವ ಶುರುಮಾಡಿದ—

"ಇವತ್ತೇ ಸರ್ಕಾರಕ್ಕೆ ಕಾಗದ ಬರೆದು, ಇಂತಹ ಸೆಲೂನ್‌ಗಳಿರುವುದರಿಂದ ನಾಗರಿಕರ ತಲೆಗೇ ಬರುತ್ತೆ. ಸರ್ಕಾರದ ಹುಕುಂ ಹೊರಡಿಸಿ ಇಂತಹ ಸೆಲೂನ್‌ನಲ್ಲಿ ಯಾರೂ ತಲೆ ಬೋಳಿಸಿಕೊಳ್ಳಬಾರದು, ಸರ್ಕಾರದವರ ಸೆಲೂನಿಗೆ ಹೋಗಿ ತಲೆ ಬೋಳಿಸಿಕೊಳ್ಳಬೇಕು, ಎಂದು ಟಾಂ ಟಾಂ ಹಾಕಿಸಬೇಕ್ರಿ! ಹಾಗೇನೇ ಎಲ್ಲರೂ ಇಂತಿಂತಹ ಹೋಟಲಿಗೆ ಹೋಗಿ ತಿಂಡಿ ತಿನಬೇಕು—ಇಂತಿಂತಹ ಕ್ಲಬ್ಬಿಗೇ ಸದಸ್ಯರಾಗಬೇಕು, ಎಂದು ಕಟ್ಟುನಿಟ್ಟು ಆಜ್ಞೆ ಹೊರಡಿಸಬೇಕು. ಆಗಲೇ ನೋಡಿ, ನಮ್ಮ ತಲೆಗಳು ಸರಿಯಾಗಿ 'ಕ್ರಾಪ್' ಆಗುತ್ತವೆ" ಎಂದ.

ಜತೆಗಾರರೆಲ್ಲಾ ಬಿಕ್ಕಿ ಬಿಕ್ಕಿ ನಗುವುದಕ್ಕಾರಂಭಿಸಿದರು.

—ನನಗೆ ಅರ್ಥವೇ ಆಗಲಿಲ್ಲ—ನಾನೂ ತಲೆ ಕೆರೆದುಕೊಂಡೆ.

*　　*　　*

'ಅಡುಗೂಲಜ್ಜಿ ಕತೆಗಳು ಬಲು ಸ್ವಾರಸ್ಯ" ಅಂದ ಕೊರವ, ಕಾಲಿನ ಚಪ್ಪಲಿಯನ್ನ ಸಡಿಲಮಾಡಿಕೊಳ್ಳುತ್ತಾ.

ನಾವ್ಯೊಬ್ಬರೂ ಮಾತೇ ಆಡಲಿಲ್ಲ. ಆದರೂ ಆತ ಸುಮ್ಮನಿರುವವನೇ? ಮುಂದುವರೆಸಿದ, ತನ್ನ ಮಾತಿನ ಸರವನ್ನ.

"ಒಂದೂರಿನಲ್ಲಿ ಒಂದು ಕರಡಿ ಇತ್ತಂತೆ. ಆ ಕರಡಿಗೆ ಪ್ರಾಯ ಬಂದಾಗ ಅದು ಒಂದು ಹೆಣ್ಣನ್ನ ಮದುವೆಯಾಯ್ತಂತೆ. ಸೊಸೆ ಕರಡಿ ಬಂದಿದ್ದು ನೋಡಿ, ತಾಯಿ ಕರಡೀಗೆ ಅಸೂಯೆ, ಕೋಪ, ಕ್ರೋಧ, ಮಾತ್ಸರ್ಯ

ಇತ್ಯಾದಿಯಂತೆ. ಗಂಡ ಹೆಂಡತಿ ಇವರ ಅನ್ಯೋನ್ಯ ನೋಡಿ, ತಾಯಿ ಕರಡಿ ಹೇಳ್ತಂತೆ. "ನಾನು ನಿಮ್ಮನೆಯಲ್ಲಿರುಲ್ಲ. ಕಾಶೀಯಾತ್ರೆಗೆ ಹೋಗ್ತೇನೆ" ಅಂತ

"ಏನಯ್ಯಾ ಕತೆ ಹೇಳಿದೆ? ನಮ್ಮ ಎಳೀ ಮಕ್ಕಳು ಕೂಡ ಇನ್ನೂ ಚೆನ್ನಾಗಿ ಕತೆ ಹೇಳುತ್ತವೆ" ಎಂದೆ.

ಆಗಂದ ಕೊರವ, "ಕತೆ ಪೂರ್ತಿ ಹೇಳುವುದಕ್ಕೆ ಮುಂಚೇನೇ ಮಾತಾಡ್ತೀರಲ್ಲ! ಆ ಕರಡಿ ತಾಯಿ ಹಾಗಂತು ಆಗ. ಈಗ ಚಿಯಾಂಗ್ ಕೈಷೇಕ್ ಎನಂದ ಗೊತ್ತೆ, ಬರ್ಮಾಗೆ—ನೀವು ಕರಡಿ ಸೊಸೇನ ಭೇಷ್ ಅಂತ ಹೊಗಳಿದಿರಲ್ಲ. ನಿಮ್ಮ ಸಂಗ ನಾನು ಬಿಡುತ್ತೇನೆ, ನಮ್ಮ ರಾಯಭಾರಿ ನಾವು ಹಿಂದಕ್ಕೆ ಕರಿಸಿ ಕೊಳ್ಳುತ್ತೇನೆ—ಥೂ! ಥೂ! ಥೂ! ಅಂದು ಷಾರ್ವೋಸಾ ಯಾತ್ರೆಗೆ ಹೋದ ನಂತೆ".

* * *

"ಆ ಪೌರೋಹಿತ ಅದೆಷ್ಟು ಚೆನ್ನಾಗಿ ತಿಥಿ ಮಾಡಿದನಯ್ಯಾ! ಅವನ ವಾಕ್ಸ್ಫುರ ಎಷ್ಟು ಚೆನ್ನಾಗಿತ್ತು! ಸರಸ್ವತಿ ಅವನ ನಾಲಿಗೆ ಮೇಲೆ ಅಡ್ಡಾಡುತ್ತಿದ್ದಳು! ಎಷ್ಟು ಚೆನ್ನಾಗಿ ತರ್ಪಣ ಬಿಟ್ಟನಯ್ಯಾ! ಎಷ್ಟು ಅಂದವಾಗಿ ಪಿಂಡ ಕಟ್ಟಿದನಯ್ಯಾ!" ಎಂದು ಹೊಗಳುಮಾಲೆ ಹಾಕಿದ ಕೊರವ, ತನ್ನ ಜನಿವಾರದ ಬ್ರಹ್ಮಗಂಟನ್ನು ತೀಡುತ್ತಾ!

"ಯಾರ ತಿಥೀಲಯ್ಯಾ! ಇದು; ಪೌರೋಹಿತ ಯಾರು? ಎಂದು ನಾವಿಬ್ಬರೂ ಒಟ್ಟಿಗೇ ಕೇಳಿದೆವು.

"ಯಾರೋ ಮಹಾ ಕವಿಯಂತೆ! ಅವನ ಸಹಸ್ರ ವರ್ಷದ ತಿಥಿಯಂತೆ! ಆ ತಿಥಿ ನಡೆಸಿದ ಪೌರೋಹಿತರ ವಿಚಾರ ನಾನು ಹೇಳ್ತಾ ಇರೋದು! ಏನು ಮಹಾನುಭಾವರಯ್ಯಾ ಆ ಪೌರೋಹಿತರು! ವೇದಶಾಸ್ತ್ರ ಪಾರಂಗತರಯ್ಯಾ, ಆ ಭೂಸುರೋತ್ತಮರು" ಎಂದ ಕೊರವ.

ನಮಗೆ ಅನುಮಾನ. "ತಿಥಿ ಮಾಡಿಸಿಕೊಂಡವನ ಹಿರಿಮೆ ಹೇಳಬೇಡವೆ! ಮಾಡಿದವರ ಹಿರಿಮೆ ಹೇಳಬಹುದೇ!" ಎಂದು.

ಆದರೆ ಕೊರವನ ನಾಲಿಗೆ ತುದೀಲಿ ವಿಷ. ಹೆದರಿ ನಾವು ಸುಮ್ಮನಾದೆವು.

—ಹೇಗೂ "ಗನ್ನಿನ ಮಧಾಯುದ್ಧ ಅಲ್ಲವೇ!"—ಈ ಕಾಲದಲ್ಲಿ.

* * *

# ಪ್ರಾಚೀನ ಮಾದರಿ

ರಿತ್ಮಿಟಿಕ್ಕು ಟೀಚರು (ಒಂದು ಅಲೌಕಿಕ ಧೈರ್ಯಗೀತಿ)

ಕೂಡಿ ಬಂದ ರೂಢಿಗಣಿತ—
ದಲ್ಲಿ ನನ್ನ ಬಾಳುವೆ.
ತಪ್ಪಿಹೋಯ್ತು ಚಕ್ರಬಡ್ಡಿ—
ನಾಳು ಮರೆತು ಆಳುವೆ!

"ರಿತ್ಮಿಟಿಕ್ಕು ಟೀಚುಮಾಡಿ
ಮರೆವೆ ಕೊರೆವ ವರಿಗಳ,
ಹಾರಿಹೋದ ಮ. ಸಾ. (ಲ.)ದಲ್ಲಿ
ಉಳಿಸಿಕೊಂಬೆ ಮರಿಗಳ!

ರಾಜಶೀವಿ, ಮದುವೆವೇಟ
ಇನ್ನು ಧರಿಸಿ ಮೊಳಗುವೆ!
ಹರಕ ಮರೆಸಿ ಮಡಿಸಿ ವಲ್ಲಿ
ಜರಬಿನಲ್ಲಿ ಗುಣಿಸುವೆ!

ಮೊತ್ತ ಮುವ್ವತ್ತೈದರಲ್ಲಿ
ಮಗಳಿಗೊಂದು ಮದುವೆಯು,
ಮನೆಯ ಪಾಟ ನಾಲ್ಕರಲ್ಲಿ
"ಅವಳಿ"ಗೊಂದು ಬೇಸರಿ;

ಶೆಟ್ಟಿ ಮಗಗೆ ತುಂಬಿ ಮಾರ್ಕು,
ಸೇರಿ ಮನಸ ನೆರಗಿಸಿ,
ಮಾಡಿದೆಂಟು ಕಾಸಿನಲ್ಲಿ
ನಡೆಯಿತೆಲ್ಲ, as you see

ಹಲ್ಲುಕಿರಿವೆ, ಬೆತ್ತ ಹಿರಿವೆ,
ಎಳೆವೆ ಗೈರುಹಾಜರು;
ಹೋಮ, ಗಾನ, ಕ್ರೋಧ, ದಂಡ—
ಎಲ್ಲ ನನ್ನ ಆಸರು.

ಸಮಯದಲ್ಲಿ ಇಂಗಲೀಷು,
ಉಬ್ಬಿಸಿದರೆ ಕನ್ನಡ;
ಮೂರು ಹೆಚ್ಚಿಸಿ ತಡವಿದಲ್ಲಿ
ಅಕ್ಬರ್, ದ್ವಿದಳ, ಕಾನಡ,—

ಎಲ್ಲ ಹೇಳಿ ಪಿಸುಣ ತಂದೆ
ಅಜ್ಜಿಯಾನೆ ತಣಿಸುವೆ;
ಬ್ಯಾಟು ಬಿಡಿಸಿ, ಸ್ಕೋರು ಮರೆಸಿ
ಹುಡುಗರನ್ನು ದಣಿಸುವೆ.

"ಹುಟ್ಟು, ಹಬ್ಬ, ನಿಮ್ಮ ಎರವು"—
ಹೆಡ್ಡುಮಾಸ್ತರೆಂಬರು;
ಕುದುರೆ ಸ್ಫೂರ್ತಿ, ಕೊಡುವೆ ಕವನ,
—ಯಾರದಿರಲಿ ಟ್ರಾನ್ಸ್‌ಫರು.

ಜಗಳ, ಕಿಚ್ಚು, ಕೆಲಸ, ಸುಸ್ತು—
ಗಳನು ಕಳೆವೆ ಗೊಣಗಿಯೆ
ರಾಜಕೀಯ, ಅವಳ ಮುನಿಸು,
ಮೇಲಿ ಊಟ, ಮರೆಯದೆ.

ಹುಡುಗರಂತೆ ಬಾಯಿ ಬಿಚ್ಚಿ
ತೋರುತಿರುವಿರಿ ಬೇಸರು.
ಕಿವಿಯ ತಿರುಚದೆ, ಹೋಗಿಬರುವೆ-
(ಬೆಲ್ಲು ಆಯಿತು; ನಶ್ಯವಿದೆಯೆ?)-

ಅರಿತ್ಮಿಟಿಕ್ಕಿನ ಟೀಚರು!
(ಹದಿನಾರು ಆಣೆಗೆ ಒಂದು ರೂ.)
ಹುಡುಗ "ವೀಕು" ನೆನಪು ಇರಲಿ,
ಹೋಗಿ ಬರುವೆ, ದೇವರು!

—ಅಶ್ರೂರ.

—(೦)—

# ಚಿತ್ರಕಾರರ ತಿಂಗಳು

ಈ ತಿಂಗಳು ಎಲ್ಲೆಲ್ಲೂ ಪ್ರದರ್ಶನಗಳು. ದೆಹಲಿಯಿಂದ ದ್ವೀಪಾಂತರದ ವರೆಗೂ ಎಲ್ಲೆಲ್ಲೂ ಪ್ರದರ್ಶನಗಳೇ. ಕಾರ್ಮಿಕನ, ನೇಗಿಲ ಯೋಗಿಯ, ಹಾಗೂ ವರ್ಣಕಲೆಗಾರರ ಸುಗ್ಗಿಯೋ ಸುಗ್ಗಿ.

ನಮ್ಮ ರಾಜೀವಪುರದಲ್ಲ ಕೂಡ ಒಂದು ಪ್ರದರ್ಶನ. ನನ್ನ ಸ್ನೇಹಿತ, "ನಾಡಾರಗಂ" ಪ್ರಸಿದ್ಧ ಕಲೆಗಾರ, ಅವನನ್ನು ಕೇಳಿದೆ. "ಏನಯ್ಯಾ! ಈ ಸಾರಿ ನಮ್ಮೂರಲ್ಲಿ ಆಳರಸರು ಪ್ರದರ್ಶನವನ್ನೇರ್ಪಡಿಸಿದ್ದಾರೆ. ಕಲಾವಿಭಾಗ ಇದೆ. ಪ್ರಧಾನಾಮಾತ್ಯರು ತಮ್ಮ ಅಮೃತ ಹಸ್ತದಿಂದ ಮೊಲದನೆಯ ಬಹು ಮಾನ ಐದು ರೂಪಾಯನ್ನು ಕೊಡುತ್ತಾರೆ. ನೀನು ನಿನ್ನ ವರುಷದ ಶ್ರಮ ವನ್ನು ಈ ಕಲೆಯ ಗುಡಿಯಲ್ಲಿ ಪ್ರದರ್ಶಿಸುವುದಿಲ್ಲವೇ?" ಎಂದು.

ಅವನೇನಂದ ಗೊತ್ತೆ! ಪೂರ್ಣ, ಹದಿನಾರಾಣೆ ಮಲಯಾಳಿ—ಅವ— ಈಗ ಡಾಮಿಸೈಲ್ಡ್ ಕನ್ನಡಿಗ—"ಕಲಾ ಪ್ರದರ್ಶನ ಸಮಿತಿಯ ಅಧ್ಯಕ್ಷರು ಯಾರು ಎಂದೇ ಗೊತ್ತಾಗಿಲ್ಲ. ನಾನು ಹೇಗೆ ಚಿತ್ರ ಬರೆಯಲಿ, ಬಣ್ಣ ಹಚ್ಚಲಿ, ಕಲೆಯ ಬಲೆಯನ್ನು ಬೀಸಲಿ?" ಎಂದ.

"ಅಧ್ಯಕ್ಷರು ಯಾರಾದರೇನಯ್ಯಾ! 'ವಸಂತವನದಲಿ ಕೂಗುವ ಕೋಗಿಲೆ ಅರಸನಾಣತಿಯ ಬಯಸುವುದಿಲ್ಲ' ಕಲೆಯ ಬಲೆಯನು ಬೀಸುವ ಭೀಮನು, ಅಧಿ ಅಕ್ಷನ ನೋಟವ ಬಯಸುವುದಿಲ್ಲ, ಅಲ್ಲವೇ!" ಅಂದೆ

"ನಿಮುಕ್ ಪ್ರಪಂಚ ಜ್ಞಾನವೇ ಇಲ್ಲ್ಯ. ಅಧಿಯಕ್ಷರ ಚಿತ್ರಂ ಬರೆದರೆ ತಾನೇ ಅಂದ ಐಂಜು ರೂಪಾಯಿ ಪ್ರಥಮ ಬಹುಮಾನಂ ದೊರೆಯುವುತು. ಅದಕ್ಕೇ ನಾನ್ ಎಲ್ಲಾರೂಂ ಕೇಟ್ಟೊಂಡಿರ್ಕೇನ್. ಯಾರು! ಅಧಿ ಅಕ್ಷಂ. ಅನ್," ಅಂದ. ತಾನು ಕಲಿತ ಕನ್ನಡವನ್ನು ಮರೆತು.

ಇದೇನು ಭಾಷಾವಾರು ಭಾಷ! ಅಖಿಲ ದಕ್ಷಿಣ ಭಾರತ!

——ಹಾಗೂ ಅಧ್ಯಕ್ಷರಾರು ಎಂದು ಏಕೆ ಕಷ್ಟಪಡಬೇಕು?

ಕಲಾ ಪ್ರದರ್ಶನದಲ್ಲಿ ಪ್ರಥಮ ಬಹುಮಾನ ಪಡೆದ ಚಿತ್ರದ ಮೂಲ ಪುರುಷರೇ ಅಧ್ಯಕ್ಷರಲ್ಲವೇ? ಎಂದಂದುಕೊಂಡು ಸುಮ್ಮನಾದೆ.

—ಕಲಾಕೋವಿ.

# ಬಣ್ಣದ ತುತ್ತೂರಿ

ಅಂಗಡೀಗೆ ಹೋದಾಗ ಇದ್ದಿಲು ಬಂದಿತ್ತು. ನಮ್ಮ ಮನೇಗೆ ಎರಡು ಮೂಟೆ ಕಳಿಸಿ, ಹಾಗೇ ಶ್ಯಾಮರಾಯನಿಗೂ ಹೇಳೋಣ. "ಇದ್ದಿಲು ಬಂದಿದೆ ಈಗಲೇ ಕೊಂಡುಕೊ" ಅಂತಂದುಕೊಂಡು, ಅವನ ಮನೆಗೆ ಹೋದಾಗ ಮಧ್ಯಾಹ್ನ ಮೂರು ಮೂರುವರೆ ಗಂಟೆ ಅವನನ್ನ ನೋಡಿದಾಗ ಸ್ವಲ್ಪ ಚಕಿತನಾದೆ. ಆಣೆಗೆರಡು ಮಾರುಲ್ಲವೇ ಗಿರಿಗಿಟ್ಟಳೆ ಅಂತ, ಅಂಥಾದ್ದೊಂದನ್ನು ಕೈಲಿಟ್ಟುಕೊಂಡು ಮೆಲ್ಲಗೆ ತಿರುಗಿಸುತ್ತಿದ್ದ

"ಮಕ್ಕಳಿಲ್ಲ ಮರಿಯಿಲ್ಲ ಇವನಿಗೆ—ಮೊನ್ನೆ ತಾನೆ ವಿಧುರಾಶ್ವತ್ಥಕ್ಕೆ ಹೋಗಿ ಬಂದಿದ್ದ. ಅಷ್ಟರಲ್ಲೇ ಈ ಮಕ್ಕಳ ಆಟದ ಸಾಮಾನು ಕೊಂಡಿದ್ದಾನಲ್ಲ. ಇವನಿಗೆ ಅಂದೆಂತಹ ದೈವಭಕ್ತಿ, ದೇವರಲ್ಲಿ ನಂಬಕೆ" ಎನ್ನಿಸಿತು.

ಅದನ್ನೇದುರುಗುಟ್ಟಿಕೊಂಡು ನೋಡಿದೆ.

"ಇದಕ್ಕೆ ಎರಡಾಣೆ ದಂಡ ತೆತ್ತೆ" ಅಂದ ನನ್ನ ಪ್ರಶ್ನೆಯನ್ನು ಊಹಿಸಿ.

"ಯಾಕಯ್ಯಾ! ಆಣೆಗೆರಡು ಮಾರ್ತಾರೆ. ಇದಕ್ಕೇನು ಚಿನ್ನದ ಮುಲಾಮು ಹಾಕಿದೆಯೇ? ಎರಡಾಣೆ ಕೊಡುಕ್ಕೆ ಅಥವಾ ಲಾಟರೀಲಿ ಬಂತೇ ಇದು" ಎಂದೆ.

ಅಯ್ಯೋ! ಇದೇ ಒಂದು ಕತೆ. ಈ ವರಾರಕ್ಕೆ ಬಂದಾಗ ನಾನು ಹೇಳ್ತಾ ಇದ್ದಿದ್ದು ಜ್ಞಾಪಕ ಇದೆಯೇ—ಎಂಟು ಸಂಸಾರ ಇರೋ ಅಂಥ ವಠಾರದ ಮನೆ ನಮಗೆ ಒಳ್ಳೇದು. ಈ Flats ಇದ್ದಹಾಗೆ ಇದು. ನಾನು ಹೊರಗೆ ಕೆಲಸಕ್ಕೆ ಹೋದರೆ ಹೆಂಡತೀಗೆ ನೆರೆ ಹೊರೆ ಅನುಕೂಲ. ಎರಡು ದಿವಸ ನಾವಿಬ್ಬರೂ ಊರುಬಿಟ್ಟು ಹೋದರೆ, ಕಳ್ಳಕಾಕರ ಭಯವಿಲ್ಲ. ಎಲ್ಲ ತರಹದ ಸಂಸಾರದ ಸೌಕರ್ಯಗಳೂ ಇವೆ ಅಂತ ಹೊಗಳ್ತಾ ಇತ್ತಿಲ್ಲವೇ?

ಈಗ ಅದೇ ಕತ್ತಿಗೆ ಬಂದಿದೆ ನೋಡು. ಮೂರು ದಿನ ಮಧ್ಯಾಹ್ನದಿಂದ ಈ ಕಾಗದ ಬರೆಯಲು ಒಂದೇಸಮನೆ ಪ್ರಯತ್ನ ಮಾಡುತ್ತಾ ಇದ್ದೇನೆ. ಕ್ಷೇಮ ಅಂತ ಬರೆಯೋ ಹೊತ್ತಿಗೆ ಪಕ್ಕದ ಮನೆ ಪಂಜಾಬಿ ಹುಡುಗ ಈ ಗಿರಿಗಿಟ್ಲೇನ ಕೊರ್ರ್ರೋ ಅಂತ ತಿರುಗಿಸುತ್ತಾ ಅದಕ್ಕೆ ಧನಿಗೂಡಿಸಿ ಏನೇನೋ ತನ್ನ ಭಾಷೆಯ ಮಾತು ಕೂಗುತ್ತಾ ಓಡಾಡುತ್ತಾನೆ. ಲೇಖನಿ ಓಡೋದು ಹಾಗಿರಲಿ— ತಲೆಯೇ ಕಳಚಿ ಬಿದ್ದು ಹೋಗುವಂತಾಗುತ್ತೆ. ಕಡೇಗೆ ಇವತ್ತು ಮಧ್ಯಾಹ್ನ ಧೈರ್ಯಮಾಡಿ, ಅವನನ್ನ ಪುಸಲಾಯಿಸಿ ಇದನ್ನು ಕೊಂಡುಕೊಂಡೆ ಎರಡಾಣೆಗೆ.

ಎರಡಾಣೆಗೆ ಬರ್ಫಿ ಬರುತ್ತೆ, ಒಂದು ಕುದುರೆ ಗಾಡಿ ಬರುತ್ತೆ, ಒಂದು ಮೋಟಾರು ಬರುತ್ತೆ, ಒಂದು ರಾಜ್ಯ ಬರುತ್ತೆ ಅಂತ ಏನೇನೋ ಹೇಳಿ, ಕೊಬ್ಬರಿ ಮಿಠಾಯಿ ಕೊಟ್ಟು, ಎರಡಾಣೆ ಕೊಟ್ಟು ಕೊಂಡುಕೊಂಡೆ. ಆ ಮೇಲೆ ನೋಡು ಈ ಕಾಗದ ಮುಂದುವರೆದಿದ್ದು. ತೀ|| ಸಮಾನರಾದ ಮಾವ ನವರ ಪಾದ ಪದ್ಮಂಗಳಲ್ಲಿ ಬಾಲಕನ ನಮಸ್ಕಾರಗಳು; ಬೆಂಗಳೂರು ಜೀವ ನದ ಕಷ್ಟ ನಿಮಗೆ ತಿಳಿದೇ ಇದೆ. ನಾನು ಈ ವಿಮಾ ಕರ್ಮದಲ್ಲಿ ಸಂಪಾದಿಸು ವುದು ವಿಮೆ ಮಾಡುವವರ ಕಾಫಿ ಖರ್ಚಿಗೇ ಸಾಲದಾಗಿದೆ.—ಅಷ್ಟು ಬರೆಯೋ ಹೊತ್ತಿಗೆ ನೀನು ಬಂದೆ—ಏನು ಸಮಾಚಾರ ಅಂತ ನಿನ್ನ ಕೇಳೋದಕ್ಕೆ ಮುಂಚೆಯೋ ಇಷ್ಟೆಲ್ಲಾ ಹೇಳಬೇಕಾಯಿತು" ಅಂದ.

"ಏನೂ ಇಲ್ಲ ಶ್ಯಾಮೂ, ಅಂಗಡಿಗೆ ಇದ್ದಿಲು ಬಂದಿತ್ತು, ಸಾಯಂಕಾಲದ ಹೊತ್ತಿಗೆ ಮುಗಿದುಹೋಗಬಹುದು, ಈಗಲೇ ಹೋಗಿ ಕೊಂಡುಬಾ ಅಂತ ಹೇಳಿ ಹೋಗೋಣ ಅಂತ ಬಂದೆ.

"ನನ್ನ ಹತ್ತಿರ ದುಡ್ಡಿದ್ದಿದ್ದರೆ, ನಾನೇ ತೆಗಿಸಿಕೊಂಡು ಬರುತ್ತಿದ್ದೆ" ಎಂದು ಹುಷಾರಾಗಿ ಒಂದು ಟಿಪ್ಪಣಿಯನ್ನೂ ಸೇರಿಸಿದೆ.

ಅವನು ಮಾತನಾಡಲು ಬಾಯ್ತೆರೆದ.

ಅಷ್ಟರಲ್ಲೇ ಒಂದು ಅಮಾನುಷ ಶಬ್ದ ಹೊರಗೆ ಹಜಾರದಲ್ಲಿ ಉದ್ಭವ ವಾಯಿತು. ಪೂರ್ವ ಪಂಜಾಬಿನ ಆರ್ತನಾದದಂತಿತ್ತು. ಶೇವಣಾತಿ ಕಳಕೊಂಡವನ ಗೋಳುಗಾನದಂತಿತ್ತು. ಪ್ರಳಯದ ಮುನ್ಸೂಚಿಕೆಯೋ ಎಂಬಂತಿತ್ತು. ಅಣುಬಾಂಬಿನ ಮರಿಯೋ ಎಂದ ಹಾಗಿತ್ತು.

ಎರಡೂ ಕಿವಿಗಳನ್ನು ನಾನು ಮುಚ್ಚಿಕೊಂಡೆ. ಶ್ಯಾಮುವೂ ಹಾಗೇ ಮಾಡಿದ. ಶಬ್ದ ನಿಂತಿತು. ಅವನೂ ಎದ್ದ.

"ಪಂಜಾಬಿ ಆದರೆ ಆಗಲಿ, ಹೋಗಿ ಜಗಳ ಕಾದೇಬಿಡ್ತೀನೆ ಅವನ ಹುಡುಗನದೇ, ಈ ಅಮಾನುಷ ಧ್ವನಿ. ಹೇಗೆ ಉಂಟುಮಾಡಿದನೋ ಆ ಸೈತಾನೇ ಬಲ್ಲ."

ಎಂದುಕೊಂಡು ಹೊರಬಿದ್ದ.

"ಇಲ್ಲೇ ಇರು, ಎರಡು ನಿಮಿಷದಲ್ಲಿ ಬಂದುಬಿಡ್ತೀನೆ. ಬರದೇ ಇದ್ದರೆ ನೆಟ್ಟಗೆ ಪೋಲೀಸಿಗೆ ಹೋಗಿ, ಹೀಗೆ ಇಂತಹ ಸ್ನೇಹಿತನನ್ನ ಆ ಪಂಜಾಬೀ ರಾಕ್ಷಸ ಖೂನಿ ಮಾಡಿದ ಅಂತ ಹೇಳು" ಎಂದು ಹೇಳಿ ಬಾಗಿಲು ದಾಟಿದ.

ಅವನು ಹೋದದ್ದೇ ತಡ, ಆ ಗಿರಿಗಿಟ್ಲೆಯನ್ನು ನಾನು ತೆಗೆದುಕೊಂಡು ಇನ್ನೂ ಮೂರು ಸುತ್ತು ತಿರುಗಿಸಿಲ್ಲ, ಅಷ್ಟರಲ್ಲೇ ಶ್ಯಾಮೂ ಬಂದೇ ಬಿಟ್ಟ.

"ಏಕೋ! ಪಂಜಾಬಿ ಸಿಗಲಿಲ್ಲವೇ?" ಅಂದೆ.

"ಹಜಾರಕ್ಕೆ ಹೋದೆ ನೋಡು, ಅಲ್ಲೇ ಹುಡುಗ ನಿಂತಿದ್ದ. ಒಂದು ಬಣ್ಣದ ತುತ್ತೂರಿ ಹಿಡಿದುಕೊಂಡು. ಪಂಜಾಬಿ ತನ್ನ ಮನೆಯಿಂದ ಓಡಿ ಬಂದು ಒಂದು ಲತ್ತೆ ಕೊಟ್ಟ ಆ ಹುಡುಗನಿಗೆ—ನಮ್ಮ ಮಹಿಶೂರ ಹುಡುಗರಿಗೆ ಆ ಏಟು ಬಿದ್ದಿದ್ದರೆ ಅಲ್ಲೇ ಬೊಂಬೂ ಸವಾರಿ – ಪಂಜಾಬಿ ಹುಡುಗ ಆ ಏಟು ತಿಂದೂ ಇನ್ನೂ ಬದುಕಿ ನಿಂತೇ ಇದ್ದ. ಅಷ್ಟು ಹೊತ್ತಿಗೆ ನನ್ನ ಕಡೆ ತಿರುಗಿದ. ಕೆಂಗಣ್ಣಾಗಿತ್ತು. ಎಲ್ಲೋ ಆ ಶಬ್ದಕ್ಕೆ ನಿದ್ರಾಭಂಗವಾಗಿರಬಹುದು ಅನ್ನಿಸಿತು. ಅದಕ್ಕೇ ಇಷ್ಟು ಕೋಪ ಅನ್ನಿಸಿತು. ನನ್ನ ಕಡೆ ನೋಡಿದಾಗಲೇ ನನಗೆ ಏಕೋ ಸಂದೇಹ. ನಿನ್ನನ್ನು ಕೂಗೋಣವೇ ಅನ್ನಿಸಿತು. ಅಷ್ಟರಲ್ಲೇ ಆತ ಹಿಂದೂಸ್ಥಾನೀಲಿ, ನನಗೆ ತಿಳಿಯೋ ಹಿಂದೂಸ್ಥಾನೀಲಿ ಹೇಳಿದ. "ಇವನ ಪೋಕರೀತನವೆಲ್ಲಾ ನಿಮ್ಮಿಂದ. ನೀವು ಯಾಕೆ ಈ ಹಾಳು ತುತ್ತೂರಿ ಕೊಂಡು ಕೊಟ್ಟಿರಿ?" ಅಂದ.

"ನಾನೆಲ್ಲಯ್ಯಾ ಕೊಂಡುಕೊಟ್ಟೆ. ಇವನ ಮೇಲೆ ಚಾಡಿ ಹೇಳುಕ್ಕೆ ನಾ ನಿಮ್ಮ ಹತ್ತಿರ ಬರ್ತಾ ಇದ್ದೆ" ಎಂದೆ

"ನೀವಲ್ಲವೇ ಎರಡಾಣೆ ಕೊಟ್ಟೋರು!" ಎಂದ.

"ಆ ಗಿರಿಗಿಟ್ಲೆ ಶಬ್ದ ತಡೆಯಲಾರದೆ ಎರಡಾಣೆ ಮತ್ತು ಸ್ವಲ್ಪ ಕೊಬ್ಬರಿ ಮಿಠಾಯಿ ಲಂಚ ಕೊಟ್ಟು ಅದನ್ನು ಕೊಂಡುಕೊಂಡೆ" ಎಂದೆ.

"ಅದೇ ನಾನಂದಿದ್ದು—ಇವನೂ ಕೆಟ್ಟರೋದು ನಿಮ್ಮಿಂದ" ಅಂದು ಹೊರಟು ಹೋದ ತನ್ನ ಕೊಠಡಿಗೆ.

—ನಾನು ಹಿಂದಕ್ಕೆ ಬಂದೆ. ಅನ್ಯಾಯವಾಯ್ತು ಎರಡಾಣೆ. ಅದಿದ್ದಿದ್ದರೆ ಮಾವನವರಿಗೆ ಮರ್ಯಾದೆಯಾಗಿ ಒಂದು ಕವರೇ ಬರೆಯಬಹುದಾಗಿತ್ತು. ಈ ಕಾರ್ಡಿನ ಮೇಲೆ ಕಾಗದ ಬರೆಯೋದು ತಪ್ಪುತ್ತಾ ಇತ್ತು" ಎಂದ.

ಇದ್ದಿಲು ಮೂಟೆ ಜ್ಞಾಪಿಸಿದೇನೇ ಹೊರಬಿದ್ದೆ.

—ಪ್ರಸಾದ್.

# ವಿದ್ಯಾರ್ಥಿ ಸಮ್ಮೇಲನ

ನಮ್ಮೂರಿನ ಆಬಾಲಗೋಪಾಲರು ಸಭೆ ಸೇರಿ, ದೇಶದ ಮುಂದಿನ ಸಮಸ್ಯೆಗಳನ್ನು ಪರಿಶೀಲಿಸಿ, ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ತುರುತ್ ಆಗ ಬೇಕಾದ ಸುಧಾರಣೆಗಳ ಪಟ್ಟಿಯೊಂದನ್ನು ತಯಾರಿಸಿದಾರೆ. ಮಹಾಜನಗಳ ಅವಗಾಹನೆಗೆ ಅದನ್ನು ನಿಮ್ಮ ಪತ್ರಮುಖೇನ ಪ್ರಕಟಿಸಲಾಗಿದೆ. ದೇಶದ ಮಕ್ಕಳು ಆಧುನಿಕ ಜೀವನ ಸಂಗ್ರಾಮದಲ್ಲಿ ವಿಜಯಿಗಳಾಗಲು ಈ ಸಲಹೆಗಳು ಸಹಾಯಕವಾಗುವುವು, ಎಂಬುದು ನಮ್ಮ ನಂಬಿಕೆ.

೧. ಪ್ರೈಮರಿ ಮತ್ತು ಮಿಡ್ಲ್ ಸ್ಕೂಲುಗಳಲ್ಲಿ ವಿದ್ಯಾರ್ಥಿಗಳನ್ನು ಬೆಂಚಿನ ಮೇಲೆ ಸುಮ್ಮನೆ ನಿಲ್ಲಿಸುವ ಬದಲು, ಅವರನ್ನು ಅಲ್ಲಿಂದ ಉಪನ್ಯಾಸ ಕೊಡಲು ಪ್ರೋತ್ಸಾಹಿಸಬೇಕು.

೨. ಅಂಕಗಣಿತ ಹೇಳಿಕೊಡುವಾಗ, ಬ್ಲಾಕ್ ಮಾರ್ಕೆಟ್ ಬೆಲೆ, ಸಲಸಲಕ್ಕೂ ಸೇಲ್ಸ್ ಟ್ಯಾಕ್ಸನ್ನು ಸೇರಿಸುವ ಪದ್ಧತಿ, ಬೆಲೆ ಇಳಿದಂತೆಲ್ಲ ಕಂಟ್ರೋಲ್ ಸಾಮಾನುಗಳಿಗೆ ಕಲ್ಲು ಮಣ್ಣು ಬೆರಕೆ ಮಾಡುವ ವಿಧಾನ, ಅಳತೆ ತೂಕ ಇತ್ಯಾದಿಗಳಲ್ಲಿ ಕೈ ಚಳಕ ಇವುಗಳನ್ನು ಕಲಿಸ ಬೇಕು.

೩. ಪ್ರಬಂಧ ರಚನೆ ಪಾಠದಲ್ಲಿ, ಮಂತ್ರಿಗಳ ಸ್ತೋತ್ರ ರಚನೆಗೆ ಹೆಚ್ಚು ಗಮನ ಕೊಡತಕ್ಕದ್ದು.

೪. ಭೂವಿವರಣೆ ಪಾಠದಲ್ಲಿ ಕನ್ನಡನಾಡು ಎಲ್ಲೆಲ್ಲಿದೆ ಎಂದು ಹೇಳದಿರುವುದು ಅಗತ್ಯ; ನಮತಾವಾದ ಪ್ರದೇಶಗಳಿಗೆ ಕೆಂಪು ಬಣ್ಣ ಬಳಿಯಬೇಕು.

೫. ಆರೋಗ್ಯ ಶಾಸ್ತ್ರದ ಪಾಠದಲ್ಲಿ ಉಪವಾಸದ ಮಹತ್ವವನ್ನು ಒತ್ತಿ ಹೇಳುವುದು.

೬. ಚರಿತ್ರೆ ಪಾಠ ಹೇಳುವಾಗ, ಕತ್ತಿಗಿಂತ ಕುಡುಗೋಲೇ ಹೆಚ್ಚೆಂದೂ, ಸತ್ತಿಗೆ ಗಿಂತ ಸುತ್ತಿಗೆಯೇ ಮೇಲೆಂದೂ ಒತ್ತಿ ಹೇಳತಕ್ಕದ್ದು.

೭. ಶಾಲೆಯ ಆಟಗಳಲ್ಲಿ—ರಾಗಿ ಮುಚ್ಚಾಲೆ ಆಟ, ಕೈ ಬೆಚ್ಚಗೆ ಮಾಡುವ ಆಟ, ರಂಗೋಲಿ ಕೆಳಗೆ ನುಸುಳುವ ಆಟ, ಕಣ್ಣಿಗೆ ಮಣ್ಣೆರಚುವ ಆಟ, ಬೀಸುವ ದೊಣ್ಣೆ ತಪ್ಪಿಸಿಕೊಳ್ಳುವ ಆಟ, ಬೆಂದ ಮನೆಯಿಂದ ಇರಿಯುವ ಆಟ, ಹಿತ್ತಲ ಬಾಗಿಲಿಂದ ನುಗ್ಗುವ ಆಟ ಇತ್ಯಾದಿಗಳನ್ನು ಆಡಿಸತಕ್ಕದ್ದು.

**ಟಿ. ಶೇಷು,**
ಕಾರ್ಯದರ್ಶಿ.

—(o)—

# ವರದಿಯ ವರದಿ

ಪತ್ರಿಕೆಗಳಲ್ಲಿ ಆಗಾಗ "ಅಧಿಕಾರವಲಯ"ಗಳಿಂದ ಹೊರಬಿದ್ದ ಟೀಕೆಗಳೂ "ಸರ್ಕಾರೀ ವರ್ತಾರ"ಗಳಿಂದ ಗೊತ್ತಾದ ವಾಸ್ತವಾಂಶಗಳೂ ಅಚ್ಚಾಗುತ್ತವೆ ಯಲ್ಲವೆ ?

ಈ ವಲಯ, ವರ್ತಾರಗಳು ಯಾವುದು ಎಂಬುದನ್ನು ಸಂಶೋಧನೆ ಯಿಂದಲೂ, ಸ್ವಪರಿಶ್ರಮದಿಂದಲೂ ಪತ್ತೆ ಹಚ್ಚಿ ಶ್ರೀ|| ಡಿ. ಎಂ. ಅಯ್ಯ ಅವರು ಒಂದು ವರದಿಯನ್ನು ಪ್ರಕಟಿಸಿದ್ದಾರೆ.

"ಸೆಕ್ರಟೇರಿಯಟ್ ಕಟ್ಟಡದಿಂದ ಸಂಜೆ ಐದು ಗಂಟೆಗೆ ಊರಿನ ನಾಲ್ಕಾರು ಕಡೆಗಳಿಗೂ ಕೆಳದರ್ಜೆಯ ನೌಕರರನ್ನು ತುಂಬಿಕೊಂಡು ಹೋಗುವ ಬಸ್ಸುಗಳೇ "ಅಧಿಕಾರಿವಲಯ" ಅವರಾಡುವ ಮಾತುಗಳಿಗೆ ಅರ್ಥ ಕಲ್ಪಿಸಿ, ಮೆಣಸು ಜೀರಿಗೆ ಬೆರೆಸಿ, "ಇಂಥವರಿಗೆ ಇನ್ನೊಂದಿಷ್ಟು ಆಗಬಹುದು, ಇಂಥದ್ದನ್ನು ಇಷ್ಟರಲ್ಲೇ ಇದು ಮಾಡಬಹುದು, ಬಹುಶಃ ಎಡವಿದರೂ ನಡೆಯಬಹುದು, ಇನ್ನೇನು ಇಂದೋ ನಾಳೆಯೋ ಬರಬಹುದು, ಪ್ರಾಯಶಃ ಎಡವಿದರೂ ನಡೆಯು ಬಹುದು, ಅಂತು ಇಂತು ಬಂದೇ ಬಿಡುತ್ತದೆ" ಎಂದು ಮುಂತಾಗಿ ಊಹಾ ಪೋಹಿಸಿ, ಅಧಿಕಾರ ವಲಯಗಳಿಂದ ತಿಳಿದು ಬಂದಿದೆ ಎಂದು ಘೋಷಿಸುವುದೇ ವಾಡಿಕೆ. "ಸರ್ಕಾರೀ ವರಾರ"ವೆಂದರೆ, ಸೆಕ್ರಟೇರಿಯಟ್‌ನ ಸುತ್ತಮುತ್ತಲಿನ ಫಲಾಹಾರ ಮಂದಿರಗಳು. ಅಲ್ಲಿ ಇಬ್ಬರು ಎದುರು ಬದುರು ಕುಳಿತು, ಇವತ್ತು ನೀನೇ ಕೊಡಬೇಕು, ಇಲ್ಲ, ನೀನೇ ಕೊಡಬೇಕು, ಎಂದು ವಾದಿಸು ತ್ತಿದ್ದರೆ, "ಬಿಕ್ಕಟ್ಟಿನ ಪರಿಸ್ಥಿತಿ ಒದಗಿದೆ" ಎಂಬುದು ಸರ್ಕಾರಿ ವರ್ತಾರದ ಅಭಿಪ್ರಾಯವಾಗುತ್ತದೆ. "ಇವತ್ತು ಎಣ್ಣೆ ವಾಸನೆ ಕೊಂಚ ಕಮ್ಮಿ" ಎಂದು ಕೊಂಡು ಹಣಕಾಸಿನ ಇಲಾಖಾ ಗುಮಾಸ್ತೆ ನಗುಮುಖನಾಗಿ ಹೊರಬಂದರೆ, "ದೇಶದ ಸ್ಥಿತಿಗತಿಗಳು ಸಮರ್ಪಕವಾಗಿ ಉತ್ತಮಗೊಳ್ಳುತ್ತಿದೆ ಎಂಬುದು ಸರ್ಕಾರಿ ವರಾರಗಳಲ್ಲಿನ ನಿಶ್ಚಿತವಾದ ಅಭಿಮತ"....... ಹಾಗೆಯೇ, "ನಂಬ ಲರ್ಹವಾದ ಕಡೆ"ಯಿಂದ ಸುದ್ದಿ ಬಂದಿದೆ ಎಂದರೆ, ಸಾಹೇಬರ ಮನೆ ಚಾಕರಿ ಮಾಡುವ ಸರ್ಕಾರಿ ಜವಾನನನುಮತಿಯಿಂದ, ಎಂದರ್ಥ. "ನಿಪುಣರು" ಹೇಳಿಕೆ ಇತ್ತಿದಾರೆ, ಎಂದರೆ ಇಂದಾಗೆ ಗುಮಾಸ್ತೆಯ ಭಾವಮೈದುನ ಹಾಗೆ

ಹೇಳಿದ, ಎಂದರ್ಥ. ಉನ್ನತಾಧಿಕಾರಿಗಳೊಬ್ಬರು ಎಂದರೆ, ಆಫೀಸರ್ ಬಾಗಿಲು ಕಾಯುವ ಜರೀಪೇಟದ ದಫೇದಾರ್ ಎಂದೂ ಆಗಬಹುದು. ಅಧಿಕೃತ ಸುದ್ದಿ, ಅಮ್ಮಾವರು ಹೊರಡಿಸಿದ್ದಾದರೂ, ಆಯಿತು."

ಹೀಗೆಯೇ, ಆ ವರದಿಯಲ್ಲಿ ಅನೇಕ ವಿಷಯಗಳನ್ನು ಅವರು ಸಂಗ್ರಹಿಸಿದ್ದಾರೆ. ವರದಿಯ ಬೆಲೆ ಗೊತ್ತಿಲ್ಲ.

---




– ಹ್ಞಾ ! ಏನಂದೆ

—ಯಾರು ಇನ್‌ಕಮ್‌ಟ್ಯಾಕ್ಸಿನವರೇ !

— ಈಗಲೇ ಬೇಕಂತೆಯೇ ಲೆಕ್ಕ ಎಲ್ಲಾ !

—ಹ್ಞಾ !

—ಅವರಿಗೆ ಹೇಳು ಎಲ್ಲಾನೂ ಕೇಂದ್ರಕ್ಕೇ ಒಟ್ಟಿಗೇ ಕಳಿಸ್ತೀವಿ. ಇವತ್ತಿದ್ದು ನಾಳೆ ಹೋಗೋರು ನಿಮಗ್ಯಾಕೆ ಈ ಗೋಳು ಅಂತ.

— ಹೇಳೋ— ಅವರಿಗ್ಯಾಕೆ ಹೆದರ್ಬೇಕು ಸಾರ್ ಈಗ—

---

# ಪರಮೇಶ್ವರ?

ಪರಮೇಶ್ವರ ಎಲ್ಲಿ ಮನೆ ಮಾಡಿದಾನೆ, ಎಂದು ಆ ಮುದುಕರು ನನ್ನನ್ನೇ ಕೇಳಬೇಕೆ? ನನಗೋ ವಯಸ್ಸು ಅವರ ನಾಲ್ಕನೆಯದರಲ್ಲೊಂದು. ಅವರ ತಿಳಿವಳಿಕೆ, ಅನುಭವ, ಆಧ್ಯಾತ್ಮ ಚಿಂತನೆ ಇವುಗಳೆದುರು ನಾನು ಕೇವಲ ಹಾಲುಗಲ್ಲದ ಹಸುಳೆ. ಸಾವಿರ ಪೆಟ್ಟುತಿಂದು, ಸಾಹುಕಾರರಾಗಿದಾರೆ, ಅವರು; ನಾನೋ, ಇಲ್ಲೂ ಗುಂಡುಕಲ್ಲು. ಬೀದಿಯಲ್ಲಿ ಬೇರೆ ಯಾರೂ ಸಿಕ್ಕಲಿಲ್ಲವೆ? ನನ್ನನ್ನೇ ಆರಿಸಿ, ಆ ವಿಚಾರ ಹೇಳು, ಅಂದರು. ಪುಣ್ಯವಶಾತ್, ನನಗೆ ಗೊತ್ತಿದ್ದು ಒಂದೇ ಪರಮೇಶ್ವರ; ಅವರಿಗೆ ಬೇಕಾಗಿದ್ದದ್ದೂ ಅದೇ ಪರಮೇಶ್ವರ. ಹೇಳಿದೆ; "ಅಕೊ, ನೋಡಿ, ಸ್ವಾಮಿ! ಕುದುರೆ ಗಾಡಿ ಬಲಕ್ಕೆ ತಿರುಗುತ್ತಿದೆ ಯಲ್ಲಾ, ಅಲ್ಲೇ" ಎಂದೆ.

ಆಗ ಅವರು, "ನಿಮಗೆ ಗೊತ್ತೇನು ಖಚಿತವಾಗಿ? ನೀವು ಅವರನ್ನು ಬಲ್ಲಿರಾ? ಎಷ್ಟು ವರ್ಷದಿಂದ ನೀವು ಈ ಬಡಾವಣೆಯಲ್ಲಿದೀರಿ?" ಎಂದು ನನ್ನನ್ನೇ ಕ್ರಾಸ್ ಮಾಡಲು ಷುರು ಮಾಡಿಬಿಟ್ಟರು. ವೃದ್ಧಾಪ್ಯ, ಬಾಯಿ ಚಪಲ ಅಂತ ಅದಕ್ಕೂ ಉತ್ತರ ಹೇಳಿದೆ. "ಇದಕ್ಕೆ ಮೊದಲು ಎಲ್ಲಿದ್ದಿರಿ? ಎಷ್ಟು ವರ್ಷ ಎಲ್ಲೆಲ್ಲಿದ್ದಿರಿ? ಹಿಂದೆ ಇದ್ದ ಬಡಾವಣೆಗಳಲ್ಲೆಲ್ಲ ಆಗ ಯಾರಾರು ಎಲ್ಲೆಲ್ಲಿದ್ದರು, ಎಂಬುದನ್ನೆಲ್ಲ ಬಲ್ಲಿರೇನು? ಒಂದೆರಡು ವಿಳಾಸ ಹೇಳಿ, ಕೇಳೋಣ" ಎಂದರು. "ಒಳ್ಳೇ ಪೀಕಲಾಟಕ್ಕೆ ಬಂತಲ್ಲಾ" ಎಂದು ಗೊಣಗುತ್ತಾ ಅವಕ್ಕೂ ಉತ್ತರ ಹೇಳಿದೆ. ಆಗ ಅವರು, "ಇರಬಹುದು, ಇರಬಹುದು! ನೀವು ಎಷ್ಟು ಓದಿದೀರಿ? ಯಾವ ಯಾವ ಕ್ಲಾಸಿನಲ್ಲಿ ಏನೇನು ಪಾಠ ಆಗಿದೆ? ಭೂವಿವರಣೆಯಲ್ಲಿ ನಂಬರೆಷ್ಟು? ಬೆಂಗಳೂರು ಪೂರ್ವ ಪಶ್ಚಿಮ ಎಷ್ಟು ಮೈಲಿ? ಈ ಬಡಾವಣೆ ಯಾವಾಗ, ಯಾರಿಂದ ರಚನೆಯಾಯಿತು? ಇದಕ್ಕೆ ಕಲ್ಲು ಹಾಕಿದವರಾರು? ಕಂಭ ನೆಟ್ಟವರಾರು? ಹೆಜ್ಜೆ ಪೂಜೆ ಮಾಡಿದವರು ಯಾರು?" ಎಂದೆಲ್ಲ ಪ್ರಾರಂಭಿಸಿದರು. "ಘಾಟಿ ಮುದುಕ!" ಎಂದು ಮೂಗಿನ ಮೇಲೆ ಬೆರಳೂರಿಸಿ, ಅವನ್ನೂ ಹೇಳಿದೆ.

ಅದು ಹೋಗಲಿ! ನಿಮ್ಮ ಮನೆ ಎಲ್ಲಿ? ಬಾಡಿಗೆ ಎಷ್ಟು? ಅಕ್ಕ ಪಕ್ಕದ ಮನೆಯವರು ಯಾರು? ಜಾತಿ? ಅವರಿಗೆ ಆ ಮನೆ ಭೋಗ್ಯವೆ, ಲಂಚವೆ, ಸಾಕೆ, ಸಾಲದೆ, ಸಾಲದ್ದೆ? ಅಕ್ಕ ಪಕ್ಕದ ಮನೆಯವರ ಹೆಸರು ಹೇಳುವಾಗ ತೊದಲುವ ನೀವು ಪರಮೇಶ್ವರನ ಮನೆ ಯಾವುದು ಎಂದು ನನಗೆ ಹೇಳಲು ಅರ್ಹತೆ ಪಡೆದಿದ್ದೀರಾ? ಅವನ ಹೆಸರಿನ ಬೋರ್ಡು ಆ ಮನೆ ಗೋಡೆ ಮೇಲಿರ

ಟಹುದು. ಬಾಡಿಗೆ ಬಾಕಿಗಾಗಿ ಆ ಹಲಗೆ ತುಂಡನ್ನು ಮನೆ ಮಾಲೀಕನಿಗೆ ಅಡ ಇಟ್ಟು ರಾತ್ರೋ ರಾತ್ರಿ ಪರಮೇಶ್ವರ ಪರಾರಿ ಯಾಕಾಗಿರಬಾರದು?" ಎಂದು ಮೂದಲಿಸುವುದಕ್ಕೆ ಮೊದಲು ಮಾಡಿದರು. ನನ್ನ ತಾತನ ತಂದೆಯ ವಯಸ್ಸು ಅವರಿಗೆ. ನಾನೇನು ಮಾಡಲಿ? ನುಂಗುವ ಹಾಗಿಲ್ಲ, ಉಗುಳುವ ಹಾಗಿಲ್ಲ.

"ಅಲ್ಲಯ್ಯಾ!" ಎಂದು ನನ್ನ ಭುಜದ ಮೇಲೆ ಕೈಹಾಕಿದರು. "ಓಹೊ! ನೀವು ಗೀವು ಹೋಯಿತು. ಅಯ್ಯ, ದಯ್ಯ, ಪ್ರಾರಂಭವಾಯತು, ಅಂದು ಕೊಂಡೆ. "ಅಲ್ಲಯ್ಯ! ನೀನು (!) ಹೇಳಿದೆಯಲ್ಲಾ, ಕುದುರೆ ಗಾಡಿ ಬಲಕ್ಕೆ ತಿರುಗುತ್ತಿದೆಯಲ್ಲಾ, ಅಲ್ಲಿ ಪರಮೇಶ್ವರ ವಾಸವಾಗಿದಾನೆ, ಅಂತ..... ಅಲ್ಲಿ ನೋಡು, ಅದೇ ಗಾಡಿ, ಈಗ ಎಡಕ್ಕೆ ತಿರುಗಿತಲ್ಲಾ, ಅಕೊ! ನೋಡು, ನಿನ್ನ ಹಾಳು ಕುದುರೆ (!) ಹಿಂದಕ್ಕೆ ಸರಿದು ದೀಪದ ಕಂಬಕ್ಕೆ ಡಿಕ್ಕಿ ಹೊಡೆಯಿತಲ್ಲಾ, ಅಕೊ! ನಿನ್ನ ದರಿದ್ರ ಗಾಡಿ, (!), ಓ, ಅದು ನಡು ರಸ್ತೆಯಲ್ಲಿ ಹಿಂಗಾಲಿನ ಮೇಲೆ ನಿಂತು ಸರ್ಕಸ್ ಮಾಡುತ್ತಿದೆಯಲ್ಲಾ........ಆ? ನಿನ್ನ ಮಾತು ನಂಬಿ ಅಷ್ಟು ದೂರ ಹೋಗಿ, ಆ ಕುದುರೇನ ನೆಚ್ಚಿಕೊಂಡು ನಾನು ಎಡಕ್ಕೊ ಬಲಕ್ಕೊ ಚಕ್ಕರ್ ಹೊಡೆಯಬೇಕೇನೋ, ನಿನ್ನಂಥವನನ್ನ ಕೇಳಿದೆನಲ್ಲಾ, ಈ ವಿಷಯಾನ, ನಾನು ... ...ನಾನೇ ಹುಚ್ಚ.... . ಹೋಗು, ನೀನಲ್ಲ" ಎಂದು ರೇಗುತ್ತ ಮುಂದೆ ನಡೆದರು. "ಹೌದು, ಸ್ವಾಮಿ! ನಿಜ, ನೀವು ಹೇಳಿದ್ದು" ಎಂದು ನಾನೂ ಹೊರಟೆ.

—ರೇವಣ್ಣ.




ಏನು ವಾದ್ಯಾರೆ! ಯಾವ ಊರಿಗೆ ಹೊರಟದ್ದೀರಿ.
ಅದೇ! ಡೆಲ್ಲೀಕ್, ಅಂದ "ಹಿಂದೂ ಕೋಡ್ ಬಿಲ್" ಇರಕೇ! ಅದನ್ನು ಶಂಡೆ ಮಾಡುಕ್ಕು.

# ಸಮಾಜಪಕ್ಷ ಆಗಕ್ಹೋಗಿ......

—

ನಮ್ಮೂರಲ್ಲೊಂದು ಗಾನ ಸಭಾ. ಅದಕ್ಕೆ ಮೆಂಬರಾಗದೇ ಇದ್ದೋರೆಲ್ಲಾ ಶುದ್ಧ ಅನಾಗರೀಕರು. ಸಮಾಜ ಬಾಹಿರರೂಂತ್ಲೇ ಲೆಖ್ಖ ನನ್ನ ಗೆಳತೀರ್ದೆಲ್ಲಾ! "ಸೇರೇ ನೀನೂ ಸಭೇಗೇ" ಅಂತ ಕಿವೀಲಿ ಕಾಲಿಡ್ತಿದ್ರು, ಅದೇಕೋ ಏನೋ—ನಮ್ಮಜ್ಜಿ ಹೇಳೋರು, ನಿನ್ಕಾಲಲ್ಲಿ ಚಕ್ರರೇಖೆ ಇದೆಕಣೆ, ನಿಂತಲ್ಲಿ ನಿಲ್ಲೋಲ್ಲ ಅಂತ, ಆ ಸಾಮುದ್ರಿಕಾ ಫಲವೇನೋ, ಇಲ್ಲಾ ನನ್ನ ಎಂಭತ್ತು ಪೌಂಡು ತೂಕದ ಭಾರೀ ಶರೀರ ಕೂಡ ಕೂಡಿಸಲ್ವೋ—ಅಂತೂ ನನಗೂ ಸಂಗೀತಕ್ಕೂ ನಾಲ್ಕು ಗಾವುದ!

ಆದರೂ, "ಶಾಖಲವಣವನುಂಬ ಹುಲು ಮನುಜ" ನಲ್ಲವೇ! ಗೆಳತೀರ ಕೈಲಿ ಗೋಳು ಹುಯ್ಸಿಕೊಂಡು ಸುಸ್ತಾಗಿ ಕೊನೆಗೊಂದು ಕಛೇರಿ ಟ್ರೈಮಾಡೇ ಬಿಡೋಣ. ಸಮಾಜ ಬಾಹಿರತ್ವಾನ ಕಳಕೊಂಡು ಸೊಸೈಟೀ ಬರ್ಡ್ (ಅರ್ಥಾತ್ ಸಮಾಜ ಪಕ್ಷಿ) ಆಗೇ ಬಿಡೋಣ ಅಂತ ನಿರ್ಧರಿಸಿದೆ.

ನಾಲ್ಕರ ಹೊತ್ತಿಗೇ ನಾರಿಯರ ಭಾಗ ಭರ್ತಿ.—ಅಲ್ಲಾ, ಏನೇನೋ ಸ್ಪರ್ಧೆಗಳನ್ನೇರ್ಪಡಿಸ್ತಾರೆ. ಕಮ್ಮೀ ಜಾಗಾನ ಆಕ್ರಮಿಸ್ಕೊಂಡು ಕೂತ್ಕೊಳ್ಳೋರು ಪ್ರಪಂಚದೊಳ್ಗೆಲ್ಲಾ ಯಾರೂಂತ ಸ್ಪರ್ಧೆ ಏರ್ಪಡಿಸ್ಬಾರ್ದ? ಭಾರತೀಯರಿಗೆ, ಅದರಲ್ಲೂ ಭಾರತೀಯ ಹೆಂಗಸ್ರಿಗೆ ಮೊದಲ್ನೇ ಬಹುಮಾನ ಸಿಕ್ಕುತ್ತೆ! ನಾವು ಅರ್ಧಡಿ ಚದರ್ದಲ್ಲಿ, ಯಾಕೆ ಸಮಯ ಬಂದ್ರೆ, ಕಾಲಡಿ ಚದರದಲ್ಲಿ ಕೂಡ ಕೂರೋದನ್ನ ಸಾಧನೆ ಮಾಡಿದೇವೆ!—ಅಂತೂ ನಾನೂ ಸಭಾಂಗಣದಲ್ಲಿ ಒಂದರ್ಧಡಿ ಚದರಾನ ಅಲಂಕರಿಸಿದೆ.

ಸ್ವಾಭಾವಿಕವಾಗಿ ಸುತ್ತಲೂ ನೋಡ್ದೆ. ವಿದ್ಯಾರ್ಥಿನೀ ವೃಂದವೊಂದ್ರಲ್ಲಿ, ಚೋಲೀ ಪೀಸುಗಳ ಚಮತ್ಕಾರ, ವಾಯಿಲ್ಲುಗಳ ವೈಖರಿ, ಬ್ರಾಕೇಡುಗಳ ಭೂಷಣದ ವರ್ಣನೆ ಸಾಗಿತ್ತು. ಗೃಹಲಕ್ಷ್ಮೀರ ಗುಂಪೊಂದು ನೆಕ್‌ಲೇಸುಗಳ, ಹೊಸಮಾದರಿ ಸರಬಳೆಗಳ ಪರಸ್ಪರ ಅನುಮೋದನ, ಮೆಚ್ಚುಕೆ ನಡೆಸುತ್ತಿತ್ತು. ಮತ್ತೊಂದ್ಕಡೆ—ನಲ್ವತ್ತಕ್ಕೆ ಮೀರಿದ ನಾರೀಮಣೀರು—ಹೆಣ್ಣುಮಕ್ಕಳ ಹೆಮ್ಮೆ, ಸೊಸೇರ ಸಿಡುಕಾಟ, ಚರ್ಚಿಸ್ತಿದ್ದರು. ನಿವೃತ್ತ ಅಧಿಕಾರಿಯೊಬ್ಬರ ಅವಶೇಷ, ನೆರೆಯಾಕೆಯೊಂದಿಗೆ, "ಅವತ್ತು ಮರಕತಂ ಪಿಳ್ಳೆ ಏನ್ನೊ

ಗ್ರಾಪಿಸಿ ಹಾಡಿದ್ರವ್ಮಾ.. ಅಲ್ಲೇ....ಅದೇ ಆ ಕಲ್ಯಾಣಿ ಕೀರ್ತನೆ....ಅಂಬನಾದು! ತ್ಸು ತ್ಸು ತ್ಸು ತ್ಸು! ಅಂತ ಲವಂಗ ಅಗಿಯುತ್ತಾ, ತಮ್ಮ ರಾಗಜ್ಞಾನಾನ ಪ್ರದರ್ಶಿಸ್ತಾ ಇದ್ರು! ನಮ್ಮ ಹಪ್ಪಳದ ಪಾಟಿ ಕೂಡ ಬಾಗಿಲ ಬಳಿ ಹೂಬತ್ತಿ ಹೊಸೀತಾ ಕೂತಿತ್ತು. ಇದಕ್ಕೂ ಸಂಗೀತ ಮೋಹ ಹಿಡೀತೇಂತ, ಬಿಟ್ಟ ಕಣ್ಣು, ಬಿಟ್ಟ ಬಾಯಿ ಆದ ನನ್ನುಖಾ ನೋಡಿ ಪಾಟಿ, "ಶೆಂಗಮ್ಮ ಇಂಗೆ ಬಂದೇ ಬರ್‍ತಾರೆ, ನೋಡಿವಾಗಾನಾ, ಆಗೇ ಹಪ್ಪಳದ ಬಾಕೀನೂ ಕೇಳಾನ" ಅಂತ ಬಂದೆ ಅಂತು. ಹರೆಯದ ಹೆಂಗಸೊಬ್ಬಳು ಮಿಕಿ ಮಿಕಿ ನೋಡ್ತಾ ಕೂತಿದ್ದಳು. ವಿಚಾರಿಸಿದ್ದಲ್ಲಿ ಹೊಸ ಮಿನಿಸ್ಟ್ರೊಬ್ಬರ ಗೃಹಿಣೀಂತ ತಿಳೀತು. ನನ್ನ ಹಾಗೇ ಸಮಾಜ ಪಕ್ಷಿ ಆಗೋಕೆ ಬಂದಿದ್ದೂಂತ ಕಾಣುತ್ತೆ. ಪಾಪ, ನೀರಿಂದ ತೆಗೆದ ಮೀನಿನಂತಿತ್ತು ಆಕೆ ಸ್ಥಿತಿ!

ನಾಲ್ಕೂಕಾಲಿಗೆ ಸರಿಯಾಗಿ ಏರಿದರು ಭಾಗವತರು ವೇದಿಕೇನ. ಪೀಠಿಕಾ ಪ್ರಕರಣ್ವಾದ ನಶ್ಯ ಮೂಗ್ಗೇರಿಸಿ, "ನಾಲ್ಕಂಟೆ ಕಾಲ ನನ್ನ ಕಸರತ್ತಿಗೆ ಬಲಿಯಾಗುವ ಪ್ರಾಣಿಗಳು"ಂತ ಒಂದು ಸಾರಿ ಸುತ್ತಲೂ ನೋಡಿದರು.

ನನ್ನೆದೆ ನಡಗ್ತು. ಕೈಕಾಲುಗಳು ಅದುರಕ್ಕೆ ಶುರು ಮಾಡಿದ್ವು. ಮೈ ಬೆವತು ಮುಖದ ಮೇಲೆ ಧಾರಾಪಾತ್ರಿಯಾಯ್ತು. ಕೈಗಳು ತಾವೇ ತಾವಾಗಿ ತಪ್ಪು ತಾಳ ಪ್ರಾರಂಭಿಸ್ಬಿಟ್ಟವು. ತುಟಿಗಳು ಪಿಟಗುಟ್ಟತೊಡಗಿದ್ವು! "ಯಾಕೇ!" ಎಂದ್ಳು ಯಮುನಾ, ಉತ್ತರವಿಲ್ಲ. "ಏನಾಗುತ್ತೆ ನಿಂಗೇ" ಸಿಂಡರ್‍ಸಿದ್ಳು ಸುಧಾ; ಮಾತಿಲ್ಲ. "ಬಾಯಾರುತ್ತೇನೇ" ಪಿ(ಬು)ಸುಗುಟ್ಟಿದ್ಳು ಭಾಮಾ; ಏನಂದ್ರೂ ಏನೂ ಇಲ್ಲ! ಗೆಳತೀರೆಲ್ಲಾ ಗಾಭರಿಯಾದ್ರು. ಇವಳ್ಗೆಲ್ಲೋ ಅದುರುವಾಯ್ವೋ, ಮೂರ್ಛೆ ರೋಗವೋ ಇರ್‍ಬೇಕು, ಯಾರಿಗ್ಗೊತ್ತು ಹೀಗೆ ಮುಚ್ಚಿಟ್ಕೊಂಡಿದಾಳೇಂತ ಎಂದು ಗೊಣಗ್ಕೊಂಡರು. ರೆಟ್ಟೆ ಎರಡ್ನೂ ಹಿಡಿದೆತ್ತಿ ಮನೇಗೆ ಎಳಕೊಂಡು ಬಂದು ಹಾಕ್ದೋರು ಇವತ್ತಿನವರೆಗೂ ನಮ್ಮನೆ ಹೊಸಲ್ತುಳಿದಿಲ್ಲ!

* * *

"ಹಾರಾಹಾಕೋವರ್ಗೂ ಹಾಡಿನ ಪಾಠ"ಂತ ಯಾರೋ ಬರೆದಿದಾರೆ. ಹಾಗೇ ನನ್ಗೂ ಹಾರ ಹಾಕೋ ತನಕ ಹಾಡ್ಡೇಳಸ್ತಾ ಇದ್ರು ನಮ್ಮಪ್ಪ ಅಮ್ಮ, ಸಂಗೀತ ಸವಿಯುಕ್ಕೆ ಗಂಧರ್ವ ಕುಲದಲ್ಲಿ ಹುಟ್ಟಿರ್‍ಬೇಕಂತೆ ಒಂದಾನೊಂದು ಜನ್ಮದಲ್ಲಿ—ನಾನು ರಾಕ್ಷಸ ಕುಲದಲ್ಲಿ ಹುಟ್ಟಿದ್ನೋ ಏನೋ—ನನಗೆ ಹಾಡು ಹತ್ತಿರ್‍ಲಿಲ್ಲ, ಮೇಷ್ಟ್ರಿಗೆ ಮರೀತಿರ್‍ಲಿಲ್ಲ. ಅವರ ಕೆಂಗಣ್ಣಿನ ಪ್ರಭಾವವೋ, ಹೂಂಕಾರದ ಹಾವಳಿಯೋ, ಅವರ್ಮುಂದೆ ಕೂತೇಂದ್ರೆ ಸರಾಗವಾಗಿ ಅಪಸ್ವರದ ದಾರೀ

ಬಿಡ್ತು, ರಾಗರಾದ್ಧಾಂತವೇ ತಯಾರಾಗ್ಬಿಡ್ತಿತ್ತು. ಮೋಷ್ನ ಭಯ ಎಷ್ಟರ ಮಟ್ಟಿಗಿತ್ತೂಂದ್ರೆ, ಹಗಲೂ ರಾತ್ರಿ

"ಬೇಗನೆ ಪತಿಯಾ ತೋರೋ
ಬಿಡುಗಡೆ ಮಾಡೋ ಈ ಹಾಡಿನ ಪಾ(ಕಾ)ರದಿಂ
ಪುರಂಧರ ವಿಠಲಾ"

ಅಂತ ಗೋಳಾವರೀ ರಾಗದಲ್ಲೇ ಆಲಾಪಿಸುತ್ತಾ ಇದ್ದೆ!

* * *

ಗಾನ ಸಭೇಲಿ ವೇದಿಕೆ ಏರ್ದೋರು ಅದೇ ನಮ್ಮೇಷ್ಟ್ರು! "ಕಾಲಹರಣ" ಕಲೀದೇ ಕಾಲಹರಣ ಮಾಡ್ತೀಯಾಂತ ಕಿವೀ ಹಿಂಡಿದ್ದ ನಮ್ಮೇಷ್ಟ್ರು; "ಅಲ ಕಲಲ್ಲ" ಅರಚ್ದೆ ಅಲ್ಲಾಡ್ಕೊಂಡು ತಿರುಗ್ತೀಯಾಂತ ಅಪ್ಪನ ಕೂಡ ಚಾಡೀ ಹೇಳಿ ಅಟ್ಟಕ್ಕೆ ಅಟ್ಟಿಸಿದ್ದ ನಮ್ಮೇಷ್ಟ್ರು! ಎಲ್ಲಕ್ಕಿಂತ ಮುಖ್ಯವಾಗಿ "ಇವರು" ನೋಡಕ್ಬಂದ ದಿನ (ಬಾಡ್ಗೇ ಬಂಡೀಲೇ ಬಂದಿದ್ರೂ ಕೂಡ) "ನನ್ನ ಪಾಲಿಂಪ ವಚ್ಚಿತಿವೋ ನಾ ಪ್ರಾಣನಾಥಾ"ನೂ, "ಈ ದಿನವೇ ಸುದಿನವು"ನೂ ಉರು ಹೊಡ್ಸಿದ್ದ ನಮ್ಮೇಷ್ಟ್ರು!

ವೀಭೂತಿ ಪಟ್ಟೆ, ಜರತಾರಿ ಶಲ್ಯ, ಸಿಲ್ಕು ಷರ್ಟು, ಕೃಷ್ಣಪ್ಪನೋರ್ನ "ಕೃಷ್ಣಭಾಗವತರ್" ಮಾಡಿತ್ತು!

* * *

ಅಲ್ಲಾ, ಕೇಳಿಲ್ವೇ "ಪಾಪಿ ಸಮುದ್ರಾ ಹೊಕ್ರೂನೂ...............!"

—ಟಿ. ಸುನಂದಮ್ಮ.

---

ಕೆಲರಂ ಸೀಪಿಯುಂ ಮೊತ್ತಿಯುಂ ಪಿಡಿದುಮಾರ್ ದಿಟ್ಟಂ ಸದಾಭಂಡದಿಂ।
ಕೆಲರಂ ಗುರ್ದಿಯುಂ ಮರ್ದಿಯುಂ ತಿರುಪಿಯುಂ ತೇದುಂ ಭುಜಾದಂಡದಿಂ॥
ಕೆಲರಂ ಕುತ್ತಿಗೆಯೊತ್ತಿಯುಂ ಪೊಣರಿಯುಂ ಪೊಯ್ದುಂ ಸಜಾದಂಡದಿಂ।
ಕಲಿ ಕಟ್ಟಾನೆ ಕಡಂಗಿ ಗೆಲ್ಲ ತೆರದಿಂ ಗೆಲ್ದಂ ಪಟೀಲ್ರಾಜರಂ॥

(ರನ್ನನ ಪಣ್ಣ ಪಿಡಿದು.)

# ಬೋನೊಳಗಿನವರು

ಪುರಾಕೃತ ಕರ್ಮ ಅಂದರೆ ಇದು! ಕೈತುಂಬ ಹಣ, ಕಿಸೆ ಮಾತ್ರ ತೂತು; ಗಂಟು ಗಂಟಾಗಿ ನೂರು ರೂಪಾಯಿ ನೋಟುಗಳನ್ನ ಮೇಜಿನ ಮೇಲೆ ಜೋಡಿಸಿ, ಎಣಿಸಿದ್ದೂ ಎಣಿಸಿದ್ದೇ, ಲಕ್ಷ, ಒಂದೂವರೆ ಅಂತ, ಆದರೂ ಹರಕಲು ಚಪ್ಪಲಿ, ಗುಂಡಿ ಇಲ್ಲದ ಕೋಟು, ಬಚ್ಚಲು ಮನೆ ಇಲ್ಲದ ಮನೆ, ಪಟವಿಲ್ಲದ ಗೋಡೆ, ತುಪ್ಪವಿಲ್ಲದ ಊಟ, ಅವರಿಗೆ.

ನನಗಂತೂ ಅವರನ್ನ ಕಂಡರೆ, ಕಣ್ಣಲ್ಲಿ ರಕ್ತ ಬರುತ್ತದೆ. ಸಾವಿರ ಜನಕ್ಕೆ ಸಾಲ ಕೊಡಿಸೋ ಮಹರಾಯರು ತಮ್ಮ ಮೈ ತೊಳೆದುಕೊಳ್ಳೋದಕ್ಕೆ ಸಾಬೂನು ಸಾಲ ತರುತ್ತಾರೆ. ತಲೆ ಬಗ್ಗಿಸಿಕೊಂಡು, ಎಂಟು, ಹನ್ನೊಂದು, ಹದಿನಾರು ಅಂತ ಮೇಲಿಂದ ಕೆಳಕ್ಕೆ, ಕೆಳಗಿಂದ ಮೇಲಕ್ಕೆ ಕೂಡುವುದು, ಹನ್ನೆರಡರಿಂದ ಭಾಗಹಾರ, ಹದಿನಾರರಿಂದ ಭಾಗಹಾರ ಮಾಡುವುದು ಇದೇ ಕೆಲಸವೇ, ಎಚ್ಚರವಾಗಿರುವ ಮುಕ್ಕಾಲುಪಾಲು ಸಮಯದಲ್ಲಿ. ಬೇಜಾರಾದಾಗ, ಕೂತಲ್ಲಿಂದಲೇ ಕಾಪಿ ಬಸಿದುಕೊಳ್ಳೋದು. ತಲೆ ಕೆಡೋದಿಲ್ಲವೆ? ಕಣ್ಣಿನ ಗತಿ ಏನು? ಕೂಡೋದು ನಿಂತರೆ, ಕಳೆಯುವುದು, ಷುರು! ಥೂ! ಥೂ! ಥೂ! ಸೊನ್ನೇಲಿ ಎಂಟು ಹೋಗೋಲ್ಲ, ಒಂಬತ್ತರಲ್ಲಿ ಏಳು ಹೋದರೆ, ಎರಡು. ತುಟಿ ಆಡುತ್ತಲೇ ಇರುತ್ತೆ. ಗಂಟಲು ಗೊಣಗುತ್ತಲೇ ಇರುತ್ತೆ! ರೂಪಾಯಿ, ಆಣೆ, ಕಾಸು, ಸಾವಿರ ಲಕ್ಷ ಇದೇ ಚಿಂತೆ, ಇದೇ ಕಂತೆ! ಪಾಪ!

ತಾವು ತಮ್ಮ ಮುಂದೆ ಸುರಿದು ಝಣಝಣಿಸುವ ಕಾಸನ್ನು ಯಾರೂ ಗಬಕ್‌ನೆ ಹಾರಿಸಿಕೊಂಡು ಹೋಗದೆ ಇರುವುದಕ್ಕೆ, ಸುತ್ತ ಕಬ್ಬಿಣದ ಕಟಕಟೆ; ಬಾಗಿಲಲ್ಲಿ ಬಂದೂಕದ ಕಾವಲು; ಮೈಯೆಲ್ಲ ಕಣ್ಣು; ಕಣ್ಣಿಗೆಲ್ಲಾ ಕನ್ನಡಕ. ಹೀಗೆ ಸಂಸಾರವನ್ನು ಬೆಳೆಸಿಕೊಂಡಿದಾರೆ, ನಾನು ಹೇಳುವ ಜನ. ಮೃಗಾಲಯದ ಪ್ರಾಣಿಗಳ ಹಾಗೆ, ಬೋನೊಳಗೇನೇ ಓಡಾಡುತ್ತಿರುತ್ತಾರೆ; ಹೊರಗಿಂದ ಬರುವವರನ್ನೆಲ್ಲ ದುರ್ಬೀನಿಂದ ದುರುಗುಟ್ಟಿ ನೋಡುವ ಅಭ್ಯಾಸ ಅವರಿಗೆ. ಬೋನಿಗಿರುವ ಕೈತೂತುಗಳಿಂದ ಅವರು ಏನೊಂದು ಕಾಗದದ ತುಂಡನ್ನು ಕೊಟ್ಟರೂ, ಅದನ್ನು ಹಾಗೊಮ್ಮೆ ಹೀಗೊಮ್ಮೆ ಅಂಗಾಲಾಗಿ ಹಿಂಗಾಲಾಗಿ ಅಡ್ಡಲಾಗಿ ನೇರವಾಗಿ ಓರೆಯಾಗಿ ಏಳು ಬಾರಿ ರೆಪ್ಪೆ ಸೋಕಿಸಿ ಪರೀಕ್ಷಿಸುವುದು ವಾಡಿಕೆ ಅವರದು. ಅನುಮಾನವೇ ಮಾನವನಾದಂತೆ, ಸಂದೇಹವೇ ದೇಹಪಡೆದಂತೆ, ಅವರ ನಡತೆ, ಅವರ ಇರುವಿಕೆ........ಬ್ಯಾಂಕ್‌ಗಳಲ್ಲಿ ಚಾಕರಿ ಮಾಡುವವರ ಪಾಡು, ಪುರಾಕೃತ ಕರ್ಮದ ಫಲ.

—ಗಂಗಾಧರ.

———o———

# ಪೂಜಾರಿಗಳ ಸಾಲು

ನನ್ನ ಮಾತು ನಡೆಯುವಾಗಲೇ ಕೊನೆಯ ಮಗ ಸಿದ್ಧವಾಗಬೇಕು ಚಾಕರಿಗೆ, ಎಂದು ಎಷ್ಟೆಷ್ಟೋ ಶ್ರಮ ಪಟ್ಟೆ. ಮನೆ ಮೇಷ್ಟರನ್ನಿಟ್ಟೆ; ಪಠ್ಯ ಪುಸ್ತಕಗಳನ್ನೆಲ್ಲ ತೆಗೆದುಕೊಟ್ಟೆ; ಪರೀಕ್ಷೆ ಪ್ರಶ್ನೆಗಳೇನು ಎಂದು "ಹನುಮಾರ್ ಆರೂಢಂ"ನ್ನು ಕೇಳಿ ತಿಳಿದು ಅವನಿಗೆ ಹೇಳಿದೆ. ಸಾಧ್ಯವಾಗಲಿಲ್ಲ. ಬಿ.ಎಸ್. ಸೀನ ಬಲು ನಿಧಾನವಾಗಿ ಮಾಡಿದ, ಪಾರ್ಟಿಗೊಂದೊಂದು ವರ್ಷ ತೆಗೆದುಕೊಂಡ. ನನ್ನ ಆತುರ ಅವನಿಗೆ ಹೇಗೆ ಅರ್ಥವಾದೀತು? ನಾನು ರಿಟೈರ್ಡ್ ಆದ ಎರಡನೆಯ ವರ್ಷ, ಅವನಿಗೆ ಗೌನೂ ಹುಡ್ಡೂ ದೊರೆತವು.

ಇನ್ನು ಮುಂದಿನ ಕೆಲಸ. ಅವನ ಜೀವನೋಪಾಯ ನಿರ್ಧಾರ. ಪ್ರಾಪ್ತಿ ಮಿತ್ರರ ದರ್ಶನ. ಮಂತ್ರಿಯ ಮುಖಾವಲೋಕನ.

ಆ ಮಂತ್ರಿಗೆ ಒಬ್ಬರು ಆಪ್ತರು. ಅವರ ಮೂಲಕ ಹೋದರೆ, ಕೆಲಸ ನಿರಾತಂಕವಾಗಿ ಕೈಗೂಡುವುದೆಂದು ಒಬ್ಬರು ಸಲಹೆ ಇತ್ತರು. ಆ ಆಪ್ತರು ಯಾರು, ಅವರ ವಾಸ ಎಲ್ಲಿ, ಅವರು ಯಾವಾಗ ಸಿಕ್ಕುತ್ತಾರೆ, ಅವರಿಗೆ ಪ್ರಿಯವಾದ ಹಣ್ಣು ಹಂಪಲುಗಳೇನು, ಅವರು ಕೋಪಿಷ್ಠರೆ, ದಯಾಳುವೆ, ಬಾಯಿಬಡುಕರೆ, ಕಪಿ ಮುಷ್ಟಿಯವರೆ ಎಂದೆಲ್ಲ ವಿಚಾರಿಸಿ ತಿಳಿದುಕೊಂಡೆ. ಆಗ, ಒಬ್ಬರು ಹೇಳಿದರು, "ಆ ಆಪ್ತರಿಗೆ ಒಬ್ಬರು ಮಿತ್ರರಿದಾರೆ; ವರ್ತಕರು; ವೃದ್ಧರು; ಕರುಣಾಳು; ಅವರನ್ನು ಒಲಿಸಿ, ಅವರ ಬಾಯಿಂದ ಒಂದು ಮಾತು ಹೇಳಿಸಿದರೆ, ಮಂತ್ರಿಯ ಆಪ್ತರಿಂದ ಶಿಪಾರ್ಸು ಪಡೆಯುವುದು ಸುಲಭ" ಎಂದು.

ಸರಿ! ವರ್ತಕರ ಕುಲಗೋತ್ರ, ಸಾಲ ಸೋಲ, ಅವರ ದೈನಂದಿನ ಜೀವನ ಇತ್ಯಾದಿಯೆಲ್ಲ ಸಂಶೋಧನೆಯಿಂದ ಪತ್ತೆಮಾಡಿದೆ. "ಅವರನ್ನು ನೇರವಾಗಿ ಕಾಣಬೇಡವೋ, ಬಡಪಾಯಿ! ಅವರ ಮನೆಯ ಹಿಮ್ಮನೆಯಲ್ಲಿ ಒಬ್ಬರು ಲಾಯರಿದಾರೆ, ಬಾಡಿಗೆಗೆ. ಆತನಿಗೆ ಅವರ ಕಿವಿಕಚ್ಚುವ ಸ್ವಾತಂತ್ರ್ಯವಿದೆ. ಸಮಯ ಸನ್ನಿವೇಶ ತಿಳಿದು ಹದವರಿತು, ಕದ ತೆರೆದು, ಆ ಲಾಯರು ನಿನ್ನ ಅಹವಾಲನ್ನು ವರ್ತಕರಿಗೆ ಹೇಳಿದರೆ, ಆಗ ನಿನಗೆ ಕರತಲಾರ್ಡರು ಖಂಡಿತ" ಎಂದರು ಒಬ್ಬರು ಮಹನೀಯರು.

ಹೊರಟೆ, ಮಗನನ್ನೂ ಕರೆದುಕೊಂಡು ಲಾಯರ ಹತ್ತಿರಕ್ಕೆ. ದಾರಿಯಲ್ಲಿ ಸಿಕ್ಕ ಸ್ನೇಹಿತರೊಬ್ಬರು ಹೇಳಿದರು, "ನೋಡಪ್ಪಾ, ಗುರುತು ಪರಿಚಯವಿಲ್ಲದೆ,

ಯಾರ ಶಿಫಾರ್ಸೂ ಇಲ್ಲದೆ, ಲಾಯರು ನಿನ್ನ ಪರ ವಾದಿಸುತ್ತಾನೆಯೇ? ಅವರಿಗೊಬ್ಬ ಸೋದರಳಿಯ ಇದಾನೆ. ಬಲು ಚುರುಕು; ಸಮಾಜ ಸೇವಕ; ಯುವಕ ನಾಯಕ; ಲಾಯರ ಮಗಳನ್ನೆ ಅವನಿಗೆ ಕೊಟ್ಟು........" ಎಂದು ಮುಂತಾಗಿ ಹೇಳಿ, ನಮ್ಮನ್ನು ಅತ್ತ ತಿರುಗಿಸಿದರು.

ಅತ್ತ ನಡೆದೆ. ಆ ಹುಡುಗ ಇರುವುದು ಒಂದು ಹಾಸ್ಟಲಿನಲ್ಲಿ. ಅಂದರೆ, ಸಿಕ್ಕುವುದು ಬಲು ಕಷ್ಟ. ಸದಾ ಹೋಟೆಲು, ಸಿನಿಮ, ಮ್ಯಾಚು, ಪರೇಡು, ನಾಟ್ಯಶಾಲೆ. ಅವನ ಸ್ನೇಹಿತ ಒಬ್ಬ "ಸ್ವಾಮಿ! ಸುಮ್ಮಸುಮ್ಮನೆ ಹುಡುಗ ಬಗ್ಗುತ್ತಾನೆಯೇ? ಅವನಿಗೆ ಆ ನಾಟ್ಯಶಾಲೆ ಆಚಾರ್ಯರ ಮಾತೆಂದರೆ ವೇದ ವಾಕ್ಯ. ಆಚಾರ್ಯದೇವೋ ಭವ, ಎಂದಿಲ್ಲವೆ, ಋಷಿಗಳು? ಆ ಆಚಾರ್ಯನನ್ನು ಹಿಡಿಯಿರಿ. ನಿಮ್ಮ ಕೆಲಸವನ್ನು ಆತ ಸುಗಮಮಾಡಿಸಿ ಕೊಡುತ್ತಾನೆ" ಎಂದ.

ಸರಿ, ಎಂದು ನಮಗೂ ತೋರಿತು. ನಾಟ್ಯಾಚಾರ್ಯನ ಸ್ಥಿತಿಗತಿಗಳೇನು, ಅವನು ಎಂಥ ಮನುಷ್ಯ, ಎಂಬುದನ್ನೆಲ್ಲ ಪತ್ತೆ ಮಾಡಿದುವು. ಆಗ ಯಾರೋ ಹೇಳಿದರು; "ನಾಟ್ಯಾಚಾರ್ಯ ಕುಗ್ಗಿ ಕುಳಿತಿದಾನೆ. ಮನೆ ಬಾಡಿಗೆ ಆರು ತಿಂಗಳು ಬಾಕಿ. ಕೋರ್ಟಿಗೆಳೆಯುವ ಸಂದಿಗ್ಧ. ನೀವು ಮನೆಯ ಮಾಲೀಕನನ್ನು ಕಂಡು, ಇನ್ನೊಂದೆರಡು ತಿಂಗಳು ಆತ ತಡೆಯುವಂತೆ ಹೇಳಿಸಿದರೆ, ಅವನು ನಿಜವಾಗಿಯೂ ನೆಮ್ಮದಿ ಪಡೆದು, ನಿಮ್ಮ ಪರವಾಗಿ ಆ ಹುಡುಗನಿಗೆ ಹೇಳಿ, ಆತ ಲಾಯರಿಗೂ, ಲಾಯರು ವರ್ತಕರಿಗೂ, ವರ್ತಕ ಆಪ್ತನಿಗೂ, ಆಪ್ತ ಮಂತ್ರಿಗೂ ಹೇಳಿ, ನಿಮ್ಮ ಹುಡುಗನಿಗೆ........" ಎಂದರು.

ಆ ಮಾತು ನ್ಯಾಯ ಎನಿಸಿತು. "ಮನೆಯ ಮಾಲೀಕ ಯಾರು, ಸ್ವಾಮಿ?" ಎಂದು ವಿಚಾರಿಸಿದೆ. "ಮಾಲೀಕರು ಯಾರು ಅಂದ್ರೆ, ಮಂತ್ರಿ" ಎಂದರು, ಅವರು ಉತ್ತರ ಕೊಡುತ್ತ.

—ನಾಗಸ್ವಾಮಿ.

---

ಪಂಡಿತಜೀಯವರು ದೇಶದೇಶದ ಮಕ್ಕಳಿಗೆ ಆನೆ ಬಹುಮಾನ ಕೊಡುವ ಸಲುವಾಗಿ ಈ ಸಾರಿ ಖೆಡ್ಡಾ ನಮ್ಮೂರಿನಲ್ಲಿ ನಡೆಯುತ್ತದೆ ಎಂಬುದು ಶುದ್ಧ ಸುಳ್ಳು.

*   *   *

ಆಂಧ್ರ ಪ್ರಾಂತ ಆಗೋ ಹೊತ್ತಿಗೆ ಡಾ|| ಪಟ್ಟಾಭಿಯವರು ರಾಷ್ಟ್ರಪತಿಯ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಾರೆ ಎನ್ನುವುದು ಸುಳ್ಳಂತೆ.

# ಮೂವನ ಮಡದಿ


ಈ ಮಹಾ ಕಾದಂಬರಿಯನ್ನು ಕುರಿತ ವಿಮರ್ಶೆಗಳು ಈಚಿಗೆ ಅಲ್ಲಲ್ಲಿ ಪ್ರಕಟವಾಗಿವೆ. ಆದರೆ, ಇದುವರೆಗೆ ಯಾವ ವಿಮರ್ಶಕನೂ ಗ್ರಂಥವನ್ನು ಓದಿದಂತೆ ಕಂಡುಬರುವುದಿಲ್ಲ. ಅದನ್ನು ಪಠಿಸುವುದು ಕಷ್ಟಸಾಧ್ಯ ಎಂಬು ದನ್ನು ನಾನು ಒಪ್ಪುತ್ತೇನೆ. ಆದರೂ, ಅಂಥ ವಿಮರ್ಶೆಗಳನ್ನು ನಾನು ಒಪ್ಪಲಾರೆ; ಮೆಚ್ಚಲಾರೆ.

ನಾನು ಮಾತ್ರ ಸದರಿ ಕಾದಂಬರಿಯನ್ನು ಮೊದಲನೆಯ ಪುಟದಿಂದ ಕೊನೆಯ ಪುಟದವರೆಗೂ, ಒಂದು ಪಂಕ್ತಿಯನ್ನೂ ಬಿಡದೆ, ಓದಿದೇನೆ; ಓದಿದ ಮೇಲೂ, ಬದುಕಿದೇನೆ. ನನ್ನ ಅಭಿಪ್ರಾಯದಲ್ಲಿ, "ಮೂವನ ಮಡದಿ"ಯನ್ನು ಬರೆದು ಬೆಳಕಿಗೆ ನೀಡಿದ ಗ್ರಂಥಕರ್ತ, ಸಾಹಸಿಯೇ ಸರಿ. ಆತನ ಭಾಷಾ ಸೇವೆಗೆ ಮಹಾಜನಗಳು ಶೀಘ್ರದಲ್ಲಿಯೇ ಅವರಿಗೆ ತಕ್ಕ ಪೂಜೆಯನ್ನು ಮಾಡುವ ರೆಂಬುದನ್ನೂ ನಾನು ನಂಬಿದೇನೆ. ಏಕೆಂದರೆ, ಯಾವ ಬರಹಗಾರನೂ ಮಾಡದ ಕಾರ್ಯವನ್ನು ಅವರು ನೆರವೇರಿಸಿದಾರೆ. ಸಾಮಾನ್ಯವಾಗಿ, ಸಾಹಿತಿ ಮಾಡಬಹುದಾದ ೧೫ ತಪ್ಪುಗಳಲ್ಲಿ ೧೫ನ್ನೂ ಒಂದೇ ಗ್ರಂಥದಲ್ಲಿ ಮಾಡಿರುವ ಕೀರ್ತಿ ಆತನಿಗೆ ಅನಾಯಾಸವಾಗಿ ಸಲ್ಲುತ್ತದೆ.

(೧) ಕಾದಂಬರಿಗೆ ಕಥೆ ಅತ್ಯವಶ್ಯಕ; ಆದರೆ, "ಮೂವನ ಮಡದಿ"ಯಲ್ಲಿ ಕಥೆಗೆ ಬದಲು ಕಗ್ಗವನ್ನೇ ತುಂಬಿದಾರೆ. (೨) ಉಪಕಥೆಗೂ ಮೂಲ ಕಥೆಗೂ ಸಂಬಂಧವಿರಬೇಕು, ಎಂಬುದು ಎರಡನೆಯ ನಿಯಮ. ಆದರೆ, ಇಲ್ಲಿ ಉಪ ಕಥೆಗಳು ಉಪಯೋಗವಿಲ್ಲದ್ದು; ಮೂಲಕಥೆ ಮೂಲೆಗೆ ಬಿದ್ದಿದೆ. (೩) ಕಥೆ ಎಲ್ಲಿ, ಯಾವಾಗ, ಏತಕ್ಕೆ ನಡೆಯಿತು ಎಂಬ ಅರಿವು ವಾಚಕನಿಗುಂಟಾಗ ಬೇಕಾದದ್ದು ನ್ಯಾಯ. ಇಲ್ಲಿ ಆ ಅರಿವು ಗ್ರಂಥಕರ್ತನಿಗೇ ಶೂನ್ಯ. (೪) ಕಾದಂಬರಿಗಳಿಗೆ ಪಾತ್ರಸಾಮಗ್ರಿ ಬೇಕು. ಈ ಕಾದಂಬರಿಯಲ್ಲಿ ಪಾತ್ರ ಗಳಿವೆಯೇ ಇಲ್ಲವೆ, ಎಂದು ಪತ್ತೆ ಹಚ್ಚಲು ನಾನು ಅದನ್ನು ಇನ್ನೊಮ್ಮೆ ಓದ ಬೇಕಾಗಿದೆ. ಆದರೆ, ಅದುಮಾತ್ರ ಅಸಾಧ್ಯ; ಅಸಹ್ಯ. (೫) ಪಾತ್ರಗಳಿಗೆ ಜೀವ ತುಂಬಿರಬೇಕು. ಇದರಲ್ಲಿ ಬರುವ ಹಲವು ಶವಗಳು ಮಾತ್ರ ಜೀವ ತುಂಬಿದಂತಿದೆ. (೬) ಸಂಭಾಷಣೆ ಸಹಜವಾಗಿರಬೇಕು; ಈ ಪುಸ್ತಕದಲ್ಲಿ ಅದು "ಮಾನುಷಿಕ"ವಾಗಿ ಕೂಡ ಇಲ್ಲ. (೭) ವಿಷಯ ಮುಗಿದ ಕೂಡಲೇ, ಮಾತು ಮುಗಿಯಬೇಕು. ಇಲ್ಲಿ ವಿಷಯಕ್ಕೆ ಬರಗಾಲ; ಮಾತು ಮೊದಲಾಗುವುದೇ ಇಲ್ಲ. (೮) ಅಳುವುದೂ ನಗುವುದೂ ಸಮಂಜಸವಾಗಿರಬೇಕು. ಇಲ್ಲಿ ಅಳ ಬೇಕಾದಾಗ, ನಗುತ್ತಾರೆ; ನಗಬೇಕಾದಾಗ, ನಮಗೆ ಅಳು ಬರುತ್ತದೆ. (೯)

ಕಾದಂಬರಿಯಲ್ಲಿ ಚಿತ್ರಿತವಾಗಿರುವ ಸ್ತ್ರೀಪುರುಷರೆಲ್ಲ ವಾಚಕರ ರಾಗದ್ವೇಷಗಳಿಗೆ ಪಾತ್ರರಾಗಬೇಕು. ಆದರೆ, ಇದರ ವಾಚಕರಿಗೆ ದ್ವೇಷ ಹುಟ್ಟುವುದು, ಪಾತ್ರಗಳ ಮೇಲಲ್ಲ, ಗ್ರಂಥಕರ್ತನ ಮೇಲೆ. (೧೦) ಪ್ರಕೃತಿ ವರ್ಣನೆ ಸತ್ಯ ಸುಂದರ ನಿತ್ಯನಿರ್ಮಲವಾಗಿರಬೇಕು. ಸರಿ. ಆದರೆ, ಈ ಮಹಾರಾಯನ ಹೊಳೆಯೆಲ್ಲ ಕೊಳೆ, ಬೆಟ್ಟವೆಲ್ಲ ತಗ್ಗು, ಹೂವೆಲ್ಲ ಮೊಗ್ಗು, ಹಾವೆಲ್ಲ ಹಗ್ಗ. (೧೧) ತನ್ನ ಅಂತರಂಗವನ್ನು ಗ್ರಂಥಕರ್ತನು ಬಯಲುಮಾಡಬೇಕು; ಈ ಗ್ರಂಥಕರ್ತನಿಗೆ ಅಂಥ ರಂಗವೇ ಇದ್ದಂತೆ ತೋರುವುದಿಲ್ಲ. (೧೨) ಪದಗಳೆಲ್ಲ ಹಿತಮಿತಲಲಿತವಾಗಿರಬೇಕು; ಸರಿ! ಆದರೂ, ಅದಕ್ಕೂ ಪಡೆದು ಬಂದಿರಬೇಕು. ಈ ಗ್ರಂಥಕರ್ತ ಪದಗಳಿಗೂ ಸಾಲದ ಕೈ ಒಡ್ಡುತ್ತಾನೆ. (೧೩) ಬರವಣಿಗೆಯಲ್ಲಿ ಓಟವಿರಬೇಕು; ಆದರೆ, ಈ ಬರಹಗಾರನ ಬರವಣಿಗೆಗೆ, ಓಟವೆಂದರೆ, ನಮ್ಮದೇ. (೧೪) ಕಾದಂಬರಿ ಪರಿಣಾಮಕಾರಿಯಾಗಿರಬೇಕು; ಆದರೆ, ಈ ಗ್ರಂಥದಿಂದಾಗುವ ಪರಿಣಾಮ ಅದರ ಕರ್ತನಿಗೆ ತಗುಲದಿರಲಿ, ಎಂಬುದೇ ನನ್ನ ಹಾರೈಕೆ. (೧೫) ಪುಸ್ತಕ ಬರೆದು ಪ್ರಕಟಿಸಿದರೆ, ನಾಲ್ಕು ಜನ ಅದರ ಗ್ರಂಥಕರ್ತ ಯಾರು, ಅದು ಎಲ್ಲಿ ಸಿಗುತ್ತದೆ, ಅದರ ಬೆಲೆ ಎಷ್ಟು ಎಂದು ವಿಚಾರಿಸುವಂತಿರಬೇಕು. ಆದರೆ, "ಮಾವನ ಮಡದಿ"ಯನ್ನು ಬರೆದವರ ಹೆಸರು ಸಿಗುವ ಸ್ಥಳ, ಬೆಲೆ, ಯಾರು ಎಂಬುದನ್ನು ವಿಚಾರಿಸಲು ಈ ವಿಮರ್ಶಕನಿಗೂ ಕುತೂಹಲ ಹುಟ್ಟಲಿಲ್ಲ!

—ರುದ್ರಪ್ಪ.




ಕನ್ನಡದ ಗುಡಿಗೆ ಕಳಸ ಇಡುವುದು ಎಂದು?

# ಮೋಹನ

ಮೋಹನ! ಮೋಹನ! ಎಂಥ ಹೆಸರು ಮಗುವಿಗೆ!
ಏನು ಮುದ್ದೊ, ಎನಿತು ಸೊಗಸೊ, ಇಂಥ ಹೆಸರ ಶಿಶುವದು!
ಬೆಂಗಳೂರವದನದಿ ಮೊಡವೆಯಂತೆ ಶೋಭಿಪ
ಗುಟ್ಟಹಳ್ಳಿ ಮನೆಯಲಿ ತೊಟ್ಟಿಲಲ್ಲಿ ಮಲಗಿದೆ.
ಗಾಳಿ ಬೆಳಕು, ಗಗನ-ಕುಸುಮ, ಗಗನ ಕೂಡ ಕಾಣದು,
ಗಾಡಿಖಾನೆ ಹಿಂದಿದು; ಮೂಸಕೆರಡು ದಶಕವು.
ಸಿಹಿಯೆ ಇಲ್ಲ ಮಗುವಿಗೆ, ಹಾಲೊ ಬರಿಯ ನೀರದು;
ತಾಯಿ ತಂದೆ, ನಾಲದಿ, ಲಾಲಿ ಹೇಳಲೊಲ್ಲರು.
ನಗೆಯೆ ಇಲ್ಲ ಮುಖದಲಿ—ಎಂಥ ಹೆಸರು ಮೋಹನ!—
ಮೆಲ್ಲನುಸಿರು ಹೆಸರನು, ಅಂಥ ತೆಳುವು, ಕೋಮಲ!

-- ೧ ---



ಅಲ್ರೀ! ಒಂಭತ್ತು ಕಾಸು ಉದ್ದಿನ ವಡೆ, ಒಂದು ಲೋಟಾ ಬಿಟ್ಟಿ ನೀರು ತೆಗೆದು ಕೊಂಡು, ಶ್ರೀ|| ಸುಬ್ಬಲಕ್ಷ್ಮಿ ಪ್ಲೇಟ್ ಹಾಕ್ರಿ ಅಂತೀರಲ್ಲ! ನಾಚಿಕೆಯಾಗುಲ್ಲವೇ!

# “ಅ” ಅಂದರೆ— ಅಮೆರಿಕದ ಲಿಂಗಯ್ಯ”

ಆ ಲಿಂಗಯ್ಯ ಆಗತಾನೆ ಅಮೇರಿಕಾದಿಂದ ವಾಪಸ್ಸು ಬಂದಿದ್ದ, ಇಲ್ಲಿ ಸಾಗದೇ ಇದ್ದ ವಿಶ್ವವಿದ್ಯಾಲಯದ ಪರೀಕ್ಷೆಯನ್ನು ಅಲ್ಲಿ ಸುಲಭವಾಗಿ ಪಡೆದು ಬಂದಿದ್ದ. ವಿಶ್ವದ ಅನುಭವ ಪಡೆದವನು, ವಿಶ್ವವಿದ್ಯಾಲಯದ ವಿದ್ಯೆ ಹೇಗಾದರೂ ಇರಲಿ ಅಂತ ಘನ ಕೇಂದ್ರದವರು ದೊಡ್ಡ ಹುದ್ದೆಯನ್ನೇ ಇತ್ತರು. ಲಿಂಗಯ್ಯನಿಗೆ ತಮ್ಮ ಸಣ್ಣ-ಪುಟ್ಟ ಕಛೇರಿಗಳನ್ನು ಅಮೇರಿಕಾದ ರೀತಿಯಲ್ಲಿ ಪ್ರಗತಿ ಹೊಂದಿಸುವುದೇ ಆತನ ಕೆಲಸ.

ಆತ ನಮ್ಮ ರಾಜೀವಪುರದ ಅಮಲ್‌ದಾರರ ಕಛೇರಿಗೆ ಬಂದ-ಪ್ರಗತಿ ಗಾಮಿಸಲು –

ಬಂದ ದಿನ ಅಲ್ಲಿದ್ದ ನೌಕರರನ್ನೆಲ್ಲಾ ಸಭೆ ಗೂಡಿಸಿದ. ಅವರಿಗೆ ಅಮೇರಿಕಾ ಕಛೇರಿಗಳ ಸೊಬಗನ್ನೆಲ್ಲಾ ವಿವರಿಸಿ, ಇಲ್ಲಿನ ಕಛೇರಿಗಳ ಕಷ್ಟನಿಷ್ಠುರಗಳನ್ನು ಕೇಳಿ ಆದಷ್ಟು ಪ್ರಗತಿ ಸೂಚಿಸಬೇಕೆಂದು ಅವನ ಹಿರಿಯಾಸೆ. ಎಷ್ಟೇ ಆಗಲಿ ಹುಡುಗ ಬುದ್ಧಿ ಅಲ್ಲವೆ ?

ಅಂದು ಶ್ಯಾನುಭೋಗ ನಾರಣಪ್ಪ ಅವರ ವಯಸ್ಸಿನ ಹಿರಿಮೆಯಿಂದ ಅಧ್ಯಕ್ಷರಾದರು. ನವಚೇತನ ಸೂಸುವುದಕ್ಕೆ ಬಂದ ಲಿಂಗಯ್ಯನ ಪರಿಚಯ ಭಾಷಣ ಅವರದೇ !

“ಸನ್ಮಾರ್ಗ ಪ್ರವರ್ತಗಳೇ, ಸೋದರ ಕಸುಬಿನವರೇ, ಭ್ರಾತೃಗಳೇ ಅಮಲಾಪುರದ ಲಿಂಗಯ್ಯ ನನ್ನ ಹಳೆ ಗೆಳೆಯನ ಮೊಮ್ಮಗ. ಈಗ ಈತನ ಅನುಭವವನ್ನು ನೋಡಿದರೆ ಅಮಲಾಪುರದ ಲಿಂಗಯ್ಯನೋ ಅಮೇರಿಕಾದ ಲಿಂಗಯ್ಯನೋ ಎಂದು ನನಗೇ ಅನುಮಾನ ಬರುವಂತಾಗಿದೆ. ಆತನ ಉಡುಪುಗಳೆಲ್ಲವೂ ನಮ್ಮ ಕಿವಿಗೇ ಮೊದಲು ತಾಕುವಂತಿವೆ. ಆತನ ಮಾತೋ ನಾಸಿಕಾದ್ಧ್ವನಿಯೊ ಎಂಬಂತಿದೆ. ಗೋಂದಗಿಯುವ ದವಡೆ, ಕನ್ನಡಕದ ಭಾರವನ್ನು ಹೊರಲಾರದ ಮೂಗು, ಎಲ್ಲವನ್ನೂ ನೋಡಿದರೆ ಅ. ಲಿಂಗಯ್ಯ ಅಂದರೆ ಅಮೇರಿಕಾದ ಲಿಂಗಯ್ಯ ಅಂತ ಖಂಡಿತ ಪಡಿಸುತ್ತವೆ. ಆತನ ಪೂರ್ವ ಜನ್ಮಗಳಲ್ಲಿ ಆತ ಕೆಂಪು ಭಾರತೀಯನಾಗಿದ್ದನೋ ಎಂದು ನನಗೆ ಅನುಮಾನ ಬರುತ್ತಿದೆ.

ಪ್ರಕೃತ ಆ ಅನುಭವವನ್ನೆಲ್ಲಾ ನಮ್ಮ ಹಿಂದುಳಿದ ರಾಜ್ಯದ ಪ್ರಗತಿಗೆ ಉಪಯೋಗಿಸಲು ಬಂದ ಅ. ಲಿಂಗಯ್ಯನಿಗೆ ನಾವೆಲ್ಲಾ ಸ್ವಾಗತ ನೀಡೋಣ.

"ಮಹನೀಯರೇ ಅ. ಲಿಂಗಯ್ಯನ ಭವ್ಯ ವಾಣಿಯನ್ನು ಕೇಳಿ"

"ಶ್ರೀಯುತ ಅ. ಲಿಂಗಯ್ಯ"

* * *

ಕರತಾಡನಗಳು ಮೂರು ನಿಮಿಷ ಆದನಂತರ ನಿಂತವು

ಅ. ಲಿಂಗಯ್ಯ ಎದ್ದು ನಿಂತ. ಕೆಮ್ಮಿ ಕ್ಯಾಕರಿಸಿ • ತನ್ನ ಭಾಷಣವನ್ನು ಆರಂಭ ಮಾಡಿದ.

" ಮಿತ್ರರೇ",

ನಮ್ಮ ದೇಶದ ಕಛೇರಿಗಳಲ್ಲಿ ಕೆಲಸವೆಲ್ಲವೂ ಎಷ್ಟು ಸಾವಧಾನವಾಗಿ ನಡೆಯುತ್ತದೆ, ಎಂಬುದಕ್ಕೆ ನಾನೇನೂ ಉದಾಹರಣೆಗಳನ್ನು ಕೊಡಬೇಕಾಗಿಲ್ಲ. ಒಂದು ನೊಣ ಹೊಡೆಯುವುದಕ್ಕೆ ಮೂರು ಜನ ಸಿಬ್ಬಂದಿ ಮೂರು ದಿನ ಬೇಕು. ಇಂದಾಗೆ ನೌಕರ ರಜಾ ಹೋದರೆ ಅಂದು ಕಛೇರಿಗೇ ರಜಾ ಕೊಟ್ಟಂತೆ. ಅಮೇರಿಕಾದಲ್ಲಿ ನಾನು ಪ್ರವಾಸ ಮಾಡಿ ಅಲ್ಲಿನ ವಿದ್ಯಮಾನಗಳನ್ನು ನೋಡಿದಾಗ ಎಂದು ನಾನು ಹಿಂತಿರುಗಿ ಬಂದು ನಮ್ಮ ದೇಶದ ಕಛೇರಿಗಳಲ್ಲಿ ಪ್ರಗತಿ ಸಾಧಿಸುವೇನೋ ಎಂದು ಹಂಬಲ ಪಡುತ್ತಿದ್ದೆ. ಅಲ್ಲಿಯೇ ನಮ್ಮ ಪ್ರಧಾನ ಸಚಿವರು ನನಗೆ ಮೊದಲು ಪರಿಚಯವಾದುದು. ನಮ್ಮಿಬ್ಬರ ಮೈತ್ರಿ ದಿನೇ ರಾತ್ರಿ ಬೆಳೆದು ಅವರಲ್ಲಿ ನನ್ನ ಆಶಯವನ್ನು ಎಷ್ಟೋಬಾರಿ ತೊದಲಿ ಹೇಳಿದ್ದೆ. ಅವರಿಲ್ಲಿಗೆ ಬಂದು ತಮ್ಮ ಸಹಜ ಸ್ಥಾನವನ್ನು ಅಲಂಕರಿಸಿದರು. ನಿನ್ನ ಆಶಯವನ್ನು ಪೂರ್ತಿ ಮಾಡಿಕೋ ಎಂದು ನನಗೆ ಆಶ್ವಾಸನೆ ಕೊಟ್ಟರು.

ಅಮೇರಿಕಾದ ಕಛೇರಿಗಳಲ್ಲಿ ನೋಡಿ ಹಿರಿಯ ಗುಮಾಸ್ತೆ ಕಿರಿಯ ಗುಮಾಸ್ತೆಗೆ ಮಾತನಾಡಬೇಕಾದರೆ ಟೆಲಿಫೋನ್ ಇದೆ ಅದರಿಂದ ಎಷ್ಟೋ ಕಾಲ ಉಳಿತಾಯವಾಗುತ್ತದೆ.

ಅರ್ಜಿ ತಂದವರು ಒಂದು "ಸ್ಲಾಟ್ ಮಿಷಿನಿಗೆ" ತಮ್ಮ ಅರ್ಜಿಯನ್ನು ಹಾಕಿ ಜತೆಗೆ ಒಂದು ರೂಪಾಯನ್ನು ಆ "ಸ್ಲಾಟ್ ಮಿಷಿನ್"ಗೆ ಹಾಕುತ್ತಾರೆ ಕೂಡಲೇ ಅರ್ಜಿ ಸಂದ ರಶೀತಿ ಹೊರಗೆ ಬರುತ್ತದೆ ಯಾರ ಅನುಕೂಲಕ್ಕೂ ವಿರಾಮಕ್ಕೂ ಕಾಯಬೇಕಾಗಿಲ್ಲ.

ಅಲ್ಲಿನ ಲೇವಾದೇವಿಯೆಲ್ಲಾ ಚೆಕ್ಕುಗಳ ಮುಖಾಂತರವೇ ಅಂದಮೇಲೆ ಒಂದೊಂದು ವ್ಯವಹಾರಕ್ಕೂ ರಶೀತಿ ಬೇಕೆಂಬ ಕಡ್ಡಾಯವಿಲ್ಲ. ಜರೂರು ಇಲ್ಲ.

ಕಛೇರಿಯಲ್ಲಿ ರಹಸ್ಯವಾದ ವಿಷಯಗಳನ್ನೆಲ್ಲಾ ಅಲ್ಲಿ ಹೆಂಗಸರೇ ನಡೆಸುತ್ತಾರೆ ಅಧಿಕಾರಿಗೆ ಅವರಲ್ಲಿ ಅಷ್ಟು ನಂಬಿಕೆ

ಇದೇ ರೀತಿ ಅಮೇರಿಕಾದಲ್ಲಿ ಕಛೇರಿಯ ಏರ್‌ಪಾಟಿಲ್ಲಾ ಕಾಲಹರಣವಾಗದೆ, ಗೋಪ್ಯ ವಿಷಯಗಳು ಹೊರಬೀಳದೆ, ಬಂದ ಅಹವಾಲುದಾರರ ಮನಸ್ಸಿಗೆ ಬೇಸರ ಮಾಡದೆ, ನಡೆಯುತ್ತವೆ. ನಮ್ಮ ದೇಶದ ಕಛೇರಿಗಳಲ್ಲೂ ನಾವು ಆರೀತಿ ಪ್ರಗತಿ ಸಾಧಿಸಬೇಕು ನೀವೆಲ್ಲ ಸಹಾಯ ನೀಡಿದರೆ. ಪ್ರಗತಿ ಸಾಧಿಸುತ್ತೇನೆ.

ಈ ಅಮೋಘವಾದ ಭಾಷಣವನ್ನು ಕೇಳಿ ಅಮಲ್‌ದಾರರ ನೌಕರರೆಲ್ಲಾ "ಢಂಗಾಗಿ" ಕರತಾಡನ ಮಾಡುವುದನ್ನೂ ಮರೆತರು ಭಾಷಣ ಮುಗಿಯಿತು ಅಂತ ಕೂಡ ಅವರಿಗೆ ತಿಳಿದಂತೆ ಕಾಣಲಿಲ್ಲ.

ಅಧ್ಯಕ್ಷ ನಾರಣಪ್ಪನವರು ಕೂತಿದ್ದಲ್ಲೇ ಒಂದು ಚಿಟಿಕೆ ನಶ್ಯ ಏರಿಸಿ, ಮೂಗು ಕೊಡವಿಕೊಂಡು ಎದ್ದು ನಿಂತಾಗಲೇ ನೌಕರರ ಸ್ತೋಮಕ್ಕೆ ಅರ್ಥವಾದದ್ದು—ಅ. ಲಿಂಗಯ್ಯನ ಭಾಷಣ ಮುಗಿಯಿತು, ಅಂತ.

"ನೌಕರರ ಭ್ರಾತೃಗಳೇ—ಅಮೇರಿಕಾದ ಲಿಂಗಯ್ಯನವರ ಅನುಭವಗಳನ್ನೆಲ್ಲಾ ಅವರು ತಮ್ಮದೇ ಆದ, ಹೃದಯಂಗಮವಾದ ರೀತಿಯಲ್ಲಿ ವರ್ಣಿಸಿದ್ದಾರೆ. ಅಮೇರಿಕಾದ ಕಛೇರಿ ಪ್ರಗತಿಯನ್ನು ವಿಶದೀಕರಿಸಿದ್ದಾರೆ. ಅವರ ಹುಮ್ಮಸ್ಸಿಗೆ ನಾನು ತಣ್ಣೀರೆರೆಚುವುದಿಲ್ಲ. ಅವರ ಆಸಕ್ತಿಗೆ ನಾನು ಬೆಂಕಿ ಇಡುವುದಿಲ್ಲ. ಆದರೂ ನಮ್ಮ ಕಛೇರಿಯಲ್ಲಿ ನಾವು ಸಾಧಿಸಿರುವ ಪ್ರಗತಿಯನ್ನು ಹೇಳ ಬಯಸುತ್ತೇನೆ.

ಹಿರಿಯ ಗುಮಾಸ್ತೆ ಕಿರಿಯ ಗುಮಾಸ್ತೆಗಳಿಗೆ ಅಮೇರಿಕಾದಲ್ಲಿ ಟೆಲಿಫೋನ್ ಸೌಕರ್ಯ ಇದೆ ಎಂದರು ನಮ್ಮ ಕಛೇರಿಯಲ್ಲಿ ನಾವಿನ್ನೂ ಮುಂದುವರೆದಿದ್ದೇವೆ. ನಮ್ಮಲ್ಲಿ ವೈರ್‌ಲೆಸ್, ಟೆಲಿಫೋನ್ ಇದೆ ಕೂಗಿದರೆ ಕಿರಿಯ ನೌಕರನಿಗಿರಲಿ, ಕಛೇರಿಗೆಲ್ಲಾ ಕೇಳಿಸುತ್ತದೆ.

ಅರ್ಜಿದಾರರು "ಸ್ಲಾಟ್ ಮೆಷಿನ್"ಗೆ ತಮ್ಮ ಅರ್ಜಿಯನ್ನೂ ಅರ್ಜಿ ದಾಖಲ್ ಮೊಬಲಗು ಒಂದು ರೂಪಾಯನ್ನೂ ತುರುಕುತ್ತಾರೆ ಎಂದರು. ಇದೇನು ಮಹಾ! ನಮ್ಮ ಇಂದಾ-ಗೆ ಗುಮಾಸ್ತೆಯೇ ಇವೆರಡನ್ನೂ ಒಂದೇ ನಿಮಿಷದಲ್ಲಿ ಮಾಡಿ ರಸೀತಿಯನ್ನೂ—ಅಂದರೆ, ಅರ್ಜಿಗೆ ರಸೀತಿಯನ್ನು—ಸಂದಿಸುತ್ತಾನೆ. ಆ ಸ್ಲಾಟ್ ಮೆಷಿನ್ನಿಗಿಂತ ಈತ ಎಷ್ಟೋ ಪ್ರಗತಿಪರ.

ರೂಪಾಯಿ ಕರಗತವಾದರೆ ನಗುನಗುತ್ತಾ ರಸೀತಿ ಕೊಡುತ್ತಾನೆ. ಯಾವ ಸ್ಲಾಟ್ ಮೆಷಿನ್ನಾಗಲಿ ನಗುತ್ತ ಕೆಲಸ ಮಾಡಬಲ್ಲುದೇ?

ಕಛೇರಿಯ ರಹಸ್ಯ ವಿಚಾರಗಳನ್ನೆಲ್ಲಾ ಅಲ್ಲಿ ತರುಣೀ ಮಣಿಯರೇ ನಡೆಸುತ್ತಾರೆ, ಅಷ್ಟು ನಂಬಿಕಸ್ಥರು ಅವರು ಎಂದಂದರು, ನಮ್ಮ ಭಾಷಣ ಕಾರರು. ನಮ್ಮ ಕಛೇರಿಯಲ್ಲಿ ಈ ವಿಚಾರದಲ್ಲೂ ನಾವು ಪ್ರಗತಿಹೊಂದಿದ್ದೇವೆ. ನೀವೆಲ್ಲಾ ಕಂಡಹಾಗೆ ನಮ್ಮ ಕಛೇರಿಯಲ್ಲಿ ಯಾವ ರಹಸ್ಯ ವಿಷಯವಾಗಲಿ ನಮ್ಮ ಸಾಹೇಬರು ಕರೀಮಣಿ ಕಟ್ಟಿದ ಕರೀ ತರುಣಿಯೇ ಅದಕ್ಕೆ ರೂಪು ಗೊಡುವವಳು. ಮನೆಯಲ್ಲಿದ್ದುಕೊಂಡೇ ಆಕೆ ಕಛೇರಿ ಕೆಲಸ ನಡೆಸುವ ಚತುರೆ ಅಲ್ಲವೇ!

ಆಲ್ಲಿನ ಲೇವಾದೇವಿಯೆಲ್ಲಾ "ಚಕ್ಕಿನ" ಮುಖಾಂತರ ಅಂದರು. ಆ ವಿಷಯದಲ್ಲೂ ನಾವು ಪ್ರಗತಿ ಹೊಂದಿದ್ದೇವೆ. ಅಂದರೆ, ಒಂದು ಕಛೇರಿಯಲ್ಲಿ "ಲೇವು" ಮಾಡುತ್ತೇವೆ—ಒಂದು ಕಛೇರಿಯಲ್ಲಿ "ದೇವು" ಮಾಡುತ್ತೇವೆ. ಅಲ್ಲದೆ ಈ ಚಕ್ಕುಗಳು ನಮಗೆ ಹಿಂದಿರುಗಿ ಬ್ಯಾಂಕಿನಿಂದ ಪುಟ ಹೊಡೆದುಬರುವ ಸಂಭವವಿಲ್ಲ—"ಬರೆದವನನ್ನು ಕೇಳಿ" ಎಂಬ ಬ್ಯಾಂಕಿನ ಷರಾದೊಂದಿಗೆ—

ಇದೆಲ್ಲಾ ನೋಡಿದರೆ ನನಗನ್ನಿಸುತ್ತದೆ, ನಾವೆಲ್ಲಾ ಅ. ಲಿಂಗಯ್ಯನವರಿಗೆ ನಮ್ಮ ಕಛೇರಿಯಲ್ಲಿ ತರಪೇತುಕೊಟ್ಟು, ಅಮೇರಿಕಾಕ್ಕೆ ಹಿಂತಿರುಗಿ ರವಾನಿಸಿದರೆ ಅಲ್ಲಿನ ಕಛೇರಿಗಳಲ್ಲಿ ಆತ ಪ್ರಗತಿಗಾಮಿಯಾಗಬಹುದು ಅಂತ.

ಆದರೆ, ನನಗೆ ನಾಳೆ "ರಿಟೈರ್" ಹುಕುಂ ಬರುವ ದಿನ. ಅರಳು ಮರುಳು ಮುದುಕ ಹೇಳಿದ ಅಂತ ನೀವು ಅಂದುಕೊಂಡರೂ ಅಂದುಕೊಳ್ಳಬಹುದು.

ನಾವೆಲ್ಲಾ ಶ್ರೀ ಅ. ಲಿಂಗಯ್ಯನವರಿಗೆ ಚಿರಋಣಿಗಳು. ನಿಮ್ಮ ಪರವಾಗಿ ನನ್ನ ಧನ್ಯವಾದಗಳು."

ಕರತಾಡನಗಳಾದುವು.

—ಇಂದಾ ಗೆ ಗುಮಾಸ್ತೆ.

# ಬಾಣವನೆಸೆದೆ

"ಒಂದು ಬಾಣವ ನಾನೊಮ್ಮೆ ಎಸೆದೆ ಮೇಲಕೆ
ಅದು ಎಲ್ಲಿ ಬಿತ್ತೋ! ಅದ ನಾನರಿಯೆ.
ಒಂದು ಗೀತವ ನಾ ಗಾಳಿಯಲಿ ತೂರಿದೆ
ಮಿತ್ರನೆದೆಯಲ್ಲಿ ಅದನ ಮರಳಿ ಕಂಡೆ"

ಅಲ್ಲಾ! ಈ ಹಾಡಿನ ಜ್ಞಾಪಕ ಏಕೆ ಬಂತು ಅನ್ನಿ. ಅದನ್ನೇ ಹೇಳ ಹೊರಟಿದ್ದೆ.

* * *

ಸೀತಾರಾಮು ನಾನೂ ಬಾಲ್ಯ ಸ್ನೇಹಿತರು. ಅವನು ಚೆನ್ನಾಗಿ ಓದಿ ಮೊದಲಿಗನಾಗಿ ಈಗ ದೊಡ್ಡ ಹುದ್ದೆಯಲ್ಲಿದ್ದಾನೆ. ಆದರೂ ಮೊದಲಿನ ಸಲಿಗೆ ಯಿಂದಲೇ ನಮ್ಮನ್ನೆಲ್ಲಾ ಮಾತನಾಡಿಸುತ್ತಾನೆ. ಅದಕ್ಕೇ ಅವನನ್ನು ಕಂಡರೆ ನಮಗೆಲ್ಲಾ ಬಲು ಪ್ರೀತಿ. ಬಲು ಹೆಮ್ಮೆ. ಅವನು ಹಾಗಾದಾಗ ನಾನು ಯಥಾಪ್ರಕಾರ ಒಂದು ಅಂಗಡಿ ಇಟ್ಟೆ ಒಂದಿಷ್ಟು ಹಣ ಕೂಡಿಸಿದೆ. ಪೌರ ಸಭಾ ಪಿತೃವಾದೆ. ಸ್ವಲ್ಪಮಟ್ಟಿಗೆ ನಾಲಿಗೆ ಜೋರು ಇತ್ತು. ತಲೆ ಕಾವೇರಿ ದಂತೆಲ್ಲಾ ನಾಲಿಗೆ ದನಿಗೂಡಿಸುತ್ತಿತ್ತು. ಕಡೆಗೆ ರಾಜಕೀಯ ಚಿಕ್ಕ ದೇವತೆ ಗಳಲ್ಲಿ ಒಬ್ಬನಾದೆ ಅಂದರೆ ದೊಡ್ಡ ದೇವತೆಗಳ ಜೊತೆ ಸಲಿಗೆಯಾಗಿ ಮಾತ ನಾಡಬಲ್ಲೆ. ಆದರೂ ನನ್ನನ್ನೇ ದೇವತೆ ಎಂದು ಯಾರೂ ನನ್ನ ಹತ್ತಿರ ಬಾರರು. ಆದರೆ, ಈ ಅಧಿಕಾರಿ ವರ್ಗದವರಿಗೆ ನನ್ನ ಕಂಡರೆ ಸ್ವಲ್ಪ ಭಯ— ಎಂದು ಯಾವ ದೊಡ್ಡ ದೇವತೆಯ ಕಿವಿ ಕಚ್ಚುತ್ತಾನೋ ಎಂಬ ಭೀತಿ.

ಇದು ನಮ್ಮಿಬ್ಬರ ಜೀವನದ ಸೂಕ್ಷ್ಮ ಪರಿಚಯ. ಅವನನ್ನು ಕಂಡರೆ ನನಗೆ ಹೆಮ್ಮೆ ಎಂದು ಹೇಳಿದ್ದೇನಲ್ಲ. ನನ್ನ ಕಂಡರೆ ಅವನಿಗೆ ಅಷ್ಟೇನೂ ಭಯವಿಲ್ಲ, ಅಧಿಕಾರಿಯಾಗಿದ್ದರೂ ಕೂಡ. ಏಕೆ ಎಂದರೆ, ಅಧಿಕಾರಿತನದಲ್ಲಿ ಮೇಲ್ಮೆಟ್ಟಿಲಲ್ಲಿದ್ದ. ಆದಕ್ಕಾಗಿ.

* * *

ಅಂದು ಕೆಂಪಾಂಬುದಿಯ ಅಂಗಳದಲ್ಲಿ ನನ್ನ ಭಾಷಣ. ನಮ್ಮಿಬ್ಬರ ಮಿತ್ರನಾದ ಕವಿಯೊಬ್ಬನ ಅಂತ್ಯಕ್ರಿಯೆಯಾದಾಗ. ಸೀತಾರಾಮು ಕೂಡ ಬಂದಿದ್ದ. "ಭಾವ ಪೂರ್ಣವಾಗಿ ಭಾಷಣ ಮಾಡಿದೆ ಕಣಯ್ಯಾ! ಈಗ ಮನೆಗೆ ಹೋಗುವುದಿದ್ದರೆ ನನ್ನ ಕಾರಿನಲ್ಲೇ ಕರೆದುಕೊಂಡು ಹೋಗುತ್ತೇನೆ" ಎಂದ.

ಅವನ ಕಾರಿನಲ್ಲೇ ಹೊರಟೆವು. ಆ ಮಾತು ಈ ಮಾತು ಆಯಿತು. ಲೋಕಾಭಿರಾಮನಾಗಿ ಅಂದೆ

"ನೋಡು ಸೀತಾರಾಮು, ಈಗಿನ ಕಾಲವೇ ಕೆಟ್ಟು ಹೋಗಿದೆ. ಪ್ರಾಯ ದವರಿಗೆ ಸಂಯಮವೇ ಇಲ್ಲದಂತಾಗಿದೆ. ನೋಡು ನಮ್ಮನೆಯ ಮೂರನೇ ಮನೆಯಲ್ಲಿ ಒಬ್ಬ ನಿವೃತ್ತ ಹೋಟೆಲ ಮಾಣಿ ಇದಾನೆ. ಗೋಪ್ಯವಾಗಿ ಅಲ್ಲಿ ಹುಡುಗರೆಲ್ಲಾ ಬಂದು ಜೂಜಾಡುತ್ತಾರೆ—ಅಂತಹ ಧರ್ಮರಾಯನಿಗೇ ಜೂಜಿ ನಿಂದ ಹೆಂಡತಿಯನ್ನೂ ಕಳೆದುಕೊಳ್ಳುವ ಪ್ರಸಂಗ ಬಂದಿತಲ್ಲವೇ! ಅಂದ ಮೇಲೆ ಈ ಹುಡುಗರ ಗತಿ ಮುಂದೆ ಹೇಗೆ? ನೀನು ಹಿರಿಯಧಿಕಾರಿಯಾಗಿದಿ ಏನಾ ದರೂ ಒಂದು ಉಪಾಯ ಹೂಡಿ ಆ ಮನೆಯನ್ನು ಶೋಧಿಸಬಾರದೆ? ಆತ ಬಲು ಕುತಂತ್ರಿ. ಎಷ್ಟೋ ಜನ ಆ ಕೆಲಸ ಮಾಡಲು ಹೋಗಿ ಪೆಚ್ಚು ತಿಂದು ಬಂದಿದ್ದಾರೆ" ಎಂದೆ.

"ನಾನೂ ಒಂದು ಕೈ ನೋಡುತ್ತೇನೆ" ಎಂದ ಸೀತಾರಾಮು ನನ್ನ ಮನೆಯ ಹತ್ತಿರ ಇಳಿಸುತ್ತಾ. ಆಗಲೇ ಆ ಮನೆಯನ್ನೂ ತೋರಿಸಿದೆ.

ಸೀತಾರಾಮು ಈ ಕೆಲಸ ಖಂಡಿತವಾಗಿ ಜಯಪ್ರದವಾಗಿ ಮಾಡುತ್ತಾನೆ ಎಂಬ ಧೈರ್ಯ ನನಗೆ. ಆತ ಬುದ್ಧಿವಂತ. ಪ್ರಾಮಾಣಿಕ. ಸಂಸಾರದಲ್ಲಿ ಬಲು ಸುಖಿ. ಅಣಿಯಾದ ಹೆಂಡತಿ. ಅವನಂತೆಯೇ ಪ್ರತಿ ಕ್ಲಾಸಿನಲ್ಲಿಯೂ ಮೊದಲಿಗನಾಗಿ ಈಗ ಬಿ. ಎ. ಪರೀಕ್ಷೆಯಲ್ಲಿ ಆರು ಪದಕಗಳನ್ನು ಪಡೆದ ಮುತ್ತಿ ನಂತಹ ಮಗ. ಒಂದೇ ಹೆಣ್ಣು. ಮದುವೆಯಾಗಿ ಅಣಿಯಾದ ಗಂಡನ ಮನೆಯಲ್ಲಿದ್ದಾಳೆ. ಇವನಿಗೆ ಕೈ ತುಂಬ ಹಣ. ಇಂತಹ ಅಧಿಕಾರಿಯಿಂದ ಲ್ಲವೇ ಈ ಜೂಜಿನ ಮನೆಗಳೆಲ್ಲಾ ಮುಕ್ತಾಯವಾಗಬೇಕು!

* * *

ಆರು ತಿಂಗಳಾಯ್ತು

ಈಶ್ವರನ ಗುಡಿಯಲ್ಲಿ ಕಾರ್ತೀಕ ಸೋಮವಾರ ಭಕ್ತಿಯಿಂದ ಪರಶಿವ ನನ್ನು ಒಲಿಸಿಕೊಳ್ಳುವ ವಿಧಾನಗಳ ಮೇಲೆ ನನ್ನ ಭಾಷಣ. ಆ ಮಧ್ಯಾಹ್ನ ನಾನು ಉರು ಹೊಡೆದಿದ್ದ ನಾಲ್ಕಾರು ಪದ್ಯಗಳನ್ನು ಗಂಭೀರವಾಗಿ ಹೇಳಿದೆ. ಭಾಷಣ ಮುಗಿಸಿದೆ. "ಏನು! ಮಹಾನುಭಾವ" ಎಂದು ಹೆಂಗಸರ ಕಡೆಯಿಂದ ವಿಮರ್ಶನೆಯೂ ಕೇಳಿ ಬಂತು. ಕೃತಾರ್ಥನಾದೆ ಎಂದು ಹಿಂತಿರುಗುತ್ತಿದ್ದಾಗ, ಈಶ್ವರಾಲಯದ ಬಿಲ್ಪತ್ರೆ ಮರದ ಹತ್ತಿರ ನಮ್ಮ ಸೀತಾರಾಮೂನ ಕಂಡೆ. ಸಾಕ್ಷಾತ್ ಪರಶಿವನಂತೆಯೇ ಇದ್ದ ಅಲ್ಲಾ! ಇವನಿಗೇನು ಇಷ್ಟು ವೈರಾಗ್ಯ ಎಂದಂದುಕೊಂಡೆ. ಹತ್ತಿರ ಹೋಗಿ ಮಾತನಾಡಿಸಿದೆ

"ಕಾರ್ತೀಕ ಸೋಮವಾರ, ದೇವರ ಸೇವೆ ಮಾಡೋಣ ಅಂತ ಬಂದೆ. ದಿನಾಗಲೂ ಬರುತ್ತೇನೆ. ಆದರೆ, ಇಂದು ಭಗವದ್ಭಕ್ತರೆಲ್ಲಾ ಬರುತ್ತಾರೆ—ಅವರುಗಳ ಸಂದರ್ಶನ ಮಾಡಿ ಧನ್ಯನಾಗೋಣ ಅಂತ ಈ ಮರದ ಕೆಳಗೆ ಕುಳಿತು ಧ್ಯಾನ ಮಾಡುತ್ತೇನೆ" ಎಂದ.

ಓಹೋ! ಇವನ ತಲೆಯೇ ಕೆಟ್ಟಿರಬೇಕು. ಈ ವೈರಾಗ್ಯ ನಾಲಿಗೆಯದಲ್ಲ, ಇವನ ರಕ್ತಕಣಗಳಲ್ಲಿಯೇ ತುಂಬಿರಬೇಕು. ಇಂತಹ ಮಾರ್ಪಾಡಾಗಲು ಇವನಿಗೆ ಏನೋ ಆಕಸ್ಮಿಕ ಆಗಿದ್ದಿರಬೇಕು. ಇವನ್ನು ಕೂಲಂಕಶವಾಗಿ ವಿಚಾರಿಸಲೇಬೇಕು ಎಂದು ಅಲ್ಲಿಯೇ ಕುಳಿತೆ. ಮಾತು ಮುಂದುವರಿಸಿದೆ. ಸ್ವಲ್ಪ ಬಳಸಿ ಈ ಮಾರ್ಪಾಡಿನ ಕಾರಣ ಏನು ಎಂದು ಕೇಳಿದೆ.

ಅವನು ನಗುತ್ತಾ ನಗುತ್ತಾ ಹೇಳಿದ. "ಇದಕ್ಯಾಕೆ ಇಷ್ಟು ಸುತ್ತಿ ಬಳಸು, ನೆಟ್ಟಗೆ ಕೇಳಬಾರದಾಗಿತ್ತೆ. ಅಷ್ಟು ಸ್ನೇಹ ಇಲ್ಲವೇ ನಿನಗೆ, ಅಷ್ಟು ಹಕ್ಕಿಲ್ಲವೇ? ಇದೇನು ರಾಜಕೀಯವೇ?

ನೀನೊಂದು ದಿನ ಚರಮ ಭಾಷಣ ಮಾಡಿದಾಗ ನಾನು ನಿನ್ನನ್ನು ಹಿಂದಕ್ಕೆ ಕರೆದುಕೊಂಡು ಹೋದಾಗ ನೀ ಹೇಳಲಿಲ್ಲವೆ, ಮೂರನೇ ಮನೆಯ ಮಾಣಿಯನ್ನು ಹಿಡಿ ಅಲ್ಲಿ ಜೂಜಾಟವಿದೆ ಅಂತೆ. ಮೂರು ವಾರದಲ್ಲಿ ಸಕಲ ಸನ್ನಾಹ ಮಾಡಿ ಆ ಮನೆಗೆ ರಾತ್ರಿ ಎಂಟು—ಎಂಟೂವರೆ ಗಂಟೆಗೆ ಮುತ್ತಿಗೆ ಹಾಕಿದೆ. ನಾನು ಒಳಗೆ ಹೋದೆ. ಅಲ್ಲಿ ನನ್ನ ಮಗ ಇದ್ದ.—ನಾಯಕರ ಜತೆಯಲ್ಲಿ.

ಅವನನ್ನು ಕರೆದುಕೊಂಡು ಹಿಂದಕ್ಕೆ ಬಂದೆ ಮುಂದಿನ ಕ್ರಮವನ್ನೇನೂ ಮಾಡಲು ನನಗೆ ಸಾಧ್ಯವಾಗಲಿಲ್ಲ ಆಗ.

ಬಹಳ ಯೋಚನೆ ಮಾಡಿದೆ. ನನ್ನ ಮಗ ಹೀಗೇಕೆ ಆದ. ನಾನು ಸರಿಯಾಗಿ ನೋಡಿಕೊಳ್ಳಲಿಲ್ಲವೇ ಅವನನ್ನ ಆಗಲೇ ನನಗೆ ಅನ್ನಿಸಿತು. ಇದೆಲ್ಲಾ ನನ್ನ ಪಾಪದ ಫಲ. ನಾನು ಒಳ್ಳೆಯವನಾಗಬೇಕು ಅಂದರೆ, ಎಲ್ಲವೂ ಸುಗಮವಾಗುವುದು ಎಂಬುದನ್ನು ಅರಿತೆ.

"ಈ ಅರಿವನ್ನುಂಟುಮಾಡಿಕೊಟ್ಟ ನಿನಗೆ ನಾನು ಚಿರಋಣಿ" ಎಂದ.

ಅವನ ಮುಖದಲ್ಲಿ ದುಃಖವೇನೂ ಕಂಡುಬರಲಿಲ್ಲ ನನಗೂ ಒಂದು ರೀತಿ ಅವನನ್ನು ನೋಡಿ ಹೊಟ್ಟೆಕಿಚ್ಚು ಬಂತು.

ಆಗಲೇ ಆ ಪದ್ಯದ ನೆನಪಾಯ್ತು ನೋಡಿ.

"ಒಂದು ಬಾಣವನೊಮ್ಮೆ ಎಸೆದೆ ಮೇಲಕೆ.
ಮಿತ್ರನೆದೆಯಲಿ ಅದನ ಮರಳಿ ಕಂಡೆ"
ಅಲ್ಲವೇ?

---

# ಸೋಮಣ್ಣನ ಸಾಹಸ

ನಮ್ಮ ಊರಿನ ಕಲ್ಪತರು ಬ್ಯಾಂಕಿನಲ್ಲಿ ವಹಿವಾಟುಗಳೆಲ್ಲಾ ಬಲು ಚುರುಕಾಗಿ ಸಾಗುತ್ತವೆ. ಇದಕ್ಕೆ ಮುಖ್ಯಕಾರಣ ಅಲ್ಲಿನ ವೃದ್ಧ ನೌಕರರು. ಹಾಗೂ ಅಲ್ಲಿನ ಪ್ರಗತಿಗಾಮಿ ಕಾರ್ಯದರ್ಶಿ. ಕಳೆದ ಹದಿನೈದು ವರ್ಷಗಳಿಂದ ಒಂದೊಂದು ಎತ್ತರದ ಕುರ್ಚಿಯಮೇಲೂ ಒಬ್ಬನೇ ಕುಳಿತುಕೊಂಡಿದ್ದಾನೆ. ಕಡೆಗೆ ಹೊಸಬರ್‍ಯಾರಾದರೂ ಆ ಎತ್ತರದ ಕುರ್ಚಿಯ ಮೇಲೆ ಕುಳಿತುಕೊಳ್ಳಲು ಪ್ರಯತ್ನಮಾಡಿದರೆ, ಆ ಕುರ್ಚಿಯೇ ಅವರನ್ನು ಕೆಳಕ್ಕೆ ತಳ್ಳಿಬಿಡುತ್ತದೆ. ಅಷ್ಟು ಸಂಪ್ರದಾಯ ಸ್ವಪೂರ್ಣ ಆ ಬ್ಯಾಂಕಿನಲ್ಲಿ.

ಬ್ಯಾಂಕಿನ ಕಾಮಲಾಪುರದ ಶಾಖೆಯಲ್ಲಿ ಇಪ್ಪತ್ತು ವರ್ಷಗಳಿಂದಲೂ ಸೋಮಣ್ಣ ನೌಕರ ಅವನ ಮಗ ವಿಶ್ವವಿದ್ಯಾನಿಲಯಕ್ಕೆ 'ಸೇರಬೇಕಾಗಿ ಬಂದಾಗ ಸೋಮಣ್ಣ ನಮ್ಮೂರಿಗೆ ವರ್ಗ ಕೇಳಿದ. ಇಂತಹ ನಂಬಿಕೆಯ ನೌಕರ! ಹೇಗೆ ಆಗುಲ್ಲ ಎಂದಾರು. ವರ್ಗವಾಯಿತು. ನಮ್ಮೂರಿನ ಬ್ಯಾಂಕಿನಲ್ಲಿ ಒಂದು ಎತ್ತರದ ಕುರ್ಚಿಯನ್ನು ಒಲಿಸಿಕೊಂಡು ದಿನಾಗಲೂ ಅದನ್ನೇರಲು ಅಭ್ಯಾಸಮಾಡಿಕೊಂಡ. ಮೂರು ತಿಂಗಳಿನಲ್ಲಿ ಆ ಪ್ರಗತಿಗಾಮಿ ಕಾರ್ಯದರ್ಶಿಯ ಬಿರುನುಡಿಗಳನ್ನು ಬೆನ್ನೆಲುಬುಗಳಿಂದಲೇ ಕೇಳಿಸಿಕೊಳ್ಳುವುದನ್ನು ಕಲಿತ. ಬ್ಯಾಂಕಿಗೆ ಬಂದವರೆಲ್ಲರೂ ಅವನ ಕಿಟಕಿಯ ಹತ್ತಿರಕ್ಕೇ ಬರುತ್ತಿದ್ದರು. ಮುದುಕ ಬೇಗ ಕೆಲಸಮಾಡಿಕೊಡುತ್ತಾನೆ ಅಂತ ತಿಳಿದ ಮೇಲೆ.

ನಾನೂ ಇವನ ಕಿಟಕಿಗೇ ಹೋಗುತ್ತಿದ್ದೆ. ನನ್ನ ಸರ್ದಿ ಬರುವತನಕ ಅವನನ್ನೆ ವ್ಯಾಸಂಗ ಮಾಡುತ್ತಿದ್ದೆ. ಒಂದು ವಯಸ್ಸಾದ ಹಾಸನದ ಟೋಪಿ, ತಲೆಯ ಕಿರಿಗಂಟನ್ನು ಏರಿ ಕುಳಿತಿತ್ತು. ಹಣೆಯ ಮೇಲೆಲ್ಲಾ ಜಿಂಕು ಷೀಟಿನಂತೆ ಮುಪ್ಪಿನ ಅಡ್ಡಗಂಥೆ. ಮೂಗಿನ ತುದಿಯಿಂದ ಇನ್ನೇನು ಬಿದ್ದೆನೋ ಎನ್ನುವ ಬೆಳ್ಳಿ ಕಟ್ಟಿನ ಕನ್ನಡಕ. ಎರಡು ಕಿವಿಯಲ್ಲೂ ಹಳೇ ಕಾಲದ ಚಿಹ್ನೆಯಂತಿರುವ ಎರಡು ಚಿನ್ನದ ತಟ್ಟು. ಒಂದು ಅಂಗಿ, ಮೇಲಿನ ಗುಂಡಿ ಬಿಚ್ಚಿದ್ದುದು. ಇಷ್ಟೇ ಕಾಣಿಸುತ್ತಿತ್ತು., ಹತ್ತು ನಿಮಿಷಕ್ಕೊಮ್ಮೆ ಹದಿನೈದು ನಿಮಿಷಕ್ಕೊಮ್ಮೆ ಹಿಂದಕ್ಕೆ ಸ್ವಲ್ಪ ತಲೆ ತಿರಿಗಿಸಿ ಕಾರ್ಯದರ್ಶಿಯ ಕುರ್ಚಿಯ ಕಡೆಗೆ ನೋಡುವ ಅಭ್ಯಾಸ.

ಇಷ್ಟನ್ನೂ ಕಂಡಿದ್ದೆ. ಕಾರ್ಯದರ್ಶಿಯ ಹೆದರಿಕೆ ಇವನಿಗೆ ಬಹಳ ಇರಬೇಕು. ಇಲ್ಲದಿದ್ದರೆ ಆ ಕಡೆ ಏಕೆ ಅಷ್ಟುಸಾರಿ ತಿರುಗಿ ತಿರುಗಿ ನೋಡಬೇಕು ಎನ್ನಿಸಿತ್ತು

ಹೋದವರ ಕೆಲಸವನ್ನೆಲ್ಲಾ ಮುಪ್ಪಾದರೂ ಚುರುಕಿನಿಂದ ನಡೆಸುತ್ತಿದ್ದ ಬ್ಯಾಂಕಿನ ಒಳ್ಳೆಯ ಹೆಸರಿಗೆ ಕಳಂಕ ತರುವಂತಿದ್ದಿಲ್ಲ.

ಗಂಟೆಗೊಮ್ಮೆ ಆ ಪ್ರಗತಿಗಾಮಿ ಕಾರ್ಯದರ್ಶಿ ಇವನ ಬೆನ್ನ ಹಿಂದೆ ಬಂದು ನಿಲುವವನು. ಸ್ವಲ್ಪ ಕೆಮ್ಮಿ ಕ್ಯಾಕರಿಸಿ ಇಷ್ಟು ತಡವಾಗಬೇಕೆ ಕೆಲಸಕ್ಕೆ ಅಂತ ಚಾವಟಿ ಹೊಡೆದ ಹಾಗೆ ಬಂದು ಮಾತನಾಡಿ ಮುಂದಕ್ಕೆ ಸಾಗುವವನು. ಇವನ ಗಡ್ಡ', ಬಿಳಿಯ ಗಡ್ಡ ಕೂಡ ಆ ಹರೆಯ ಕಾರ್ಯದರ್ಶಿಯ ಮಾತನ್ನು ಕೇಳಿ ವಿವರ್ಣವಾಗುತ್ತಿತ್ತು. ಕನ್ನಡಕ ಮೂಗಿನ ಸೇತುವೆಯ ಮೇಲಕ್ಕೇರುತ್ತಿತ್ತು.

ಇಂತಹ ಸೋಮಣ್ಣನನ್ನು ಕಂಡಾಗಲೆಲ್ಲಾ ನನಗೆ ದುಃಖವಾಗುತ್ತಿತ್ತು. ಈ ಪ್ರಾಣಿ ಈ ಕಾರ್ಯದರ್ಶಿಗೇ ಈ ಇಳಿವಯಸ್ಸಿನಲ್ಲಿ ಹೆದರಿ ಸಾಯುತ್ತಾನಲ್ಲಾ ! ಇವನು ಮನೆಯಲ್ಲಿ ಮಹಾಕಾಳಿಯೆದುರಿಗೆ ಇನ್ನು ಹೇಗೆ ಬದುಕಾನು? ಜೀವನ ಸಂಗ್ರಾಮದಲ್ಲಿ ಈತ ಹೇಗೆ ಧೈರ್ಯವಾಗಿ ಹೋರಾಡಬಲ್ಲ? ಹಾಗೂ ಇಷ್ಟು ವರುಷ ಹೇಗೆ ಪಥ ಜರುಗಿಸಿದ ಎಂಬಿವೇ ಪ್ರಶ್ನೆಗಳು ಮನಸ್ಸಿಗೆ ತೋರುತ್ತಿದ್ದುವು.

* * *

ಆ ಸಾಯಂಕಾಲ ಬಸ್ಸಿಗಾಗಿ ಕಾದಿದ್ದೆ. ಬಂದ ಬಸ್ಸುಗಳು ಸಿಗೋ ಬಸ್ಸುಗಳಾಗಿದ್ದಿಲ್ಲ. ಅಷ್ಟು ಹೊತ್ತಿಗೆ, "ಕಿಡಿವಾಣಿ ಆರೇಕಾಸು, ಕಿಡಿವಾಣಿ ಆರೇ ಕಾಸು" ಎಂದು ಕೂಗಿಕೊಂಡು ಒಬ್ಬ ಹುಡುಗ ಅಡ್ಡಾಡ ಹತ್ತಿದ. ಹೇಗೂ ಇನ್ನರ್ಧಗಂಟೆ ಕಾಯಬೇಕು. ಈ ಪತ್ರಿಕೆಯನ್ನು ಓದಿಯಾದರೂ ಕಾಲ ಕಳೆಯೋಣ ಅಂತ ಒಂದು ಪ್ರತಿ ಕೊಂಡೆ. ಮೊದಲನೆಯ ಹಾಳೆಯಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬಾವುಟ ಹಾರಿಸಿಧ ಹಾಗೆ ಸುದ್ದಿ ಹಾರಿಸಿದ್ದರು.

**"ಕಲ್ಪತರು ಬ್ಯಾಂಕಿನಲ್ಲಿ ದರೋಡೆಯ ಪ್ರಯತ್ನ, ಸೋಮಣ್ಣನವರ ಸಾಹಸ."**

ವಿಶದವಾಗಿ ಬಂದಿದ್ದ ಸುದ್ದಿಯನ್ನು ಓದಿದೆ. ಬ್ಯಾಂಕಿಗೆ ಮಧ್ಯಾಹ್ನ ಎರಡು ಗಂಟೆಯ ಹೊತ್ತಿನಲ್ಲಿ ಒಬ್ಬ ಧಡೂತಿಯ ಖಾಂಧಾರಿ ಬಂದಿದ್ದನಂತೆ. ಸೋಮಣ್ಣನ ಕಿಟಕಿಯ ಹತ್ತಿರ ಬಂದು, "ಇರುವ ಹಣವನ್ನೆಲ್ಲಾ ಕೊಡಿ, ಇಲ್ಲದಿದ್ದರೆ ಗುಂಡು ಹಾರಿಸುವೆ" ಎಂದುಸುರಿದನಂತೆ. ಸೋಮಣ್ಣನವರು ಒಂದೇ ಕ್ಷಣದಲ್ಲಿ ತಮ್ಮ ಕೈಯಲಿದ್ದ ಲೇಖನಿಯನ್ನು ಅವನ ಬಲಗಣ್ಣಿಗೆ ಗುರಿಯಿಟ್ಟು ಎಸೆದರಂತೆ. ಇನ್ನೊಂದು ಕ್ಷಣದಲ್ಲಿ ಎದುರಿಗಿದ್ದ ಶಾಯಿಯ ಬುಡ್ಡಿಯನ್ನು ಅವನ ಹಣೆಗೆ ಎಸೆದರಂತೆ. ಗಾಳಿಗೆ ಗುಂಡನ್ನು ಹಾರಿಸಿ ಆ ಖಾಂಧಾರಿ ಜ್ಞಾನ ತಪ್ಪಿ ಕೆಳಕ್ಕೆ ಬಿದ್ದನಂತೆ. ಆ ಶಬ್ದವನ್ನು ಕೇಳಿ ಬಾಗಿಲಲ್ಲಿದ್ದ ಕಾವಲು

ಗಾರ ಇತರರು ಬಂದು ಜ್ಞಾನ ತಪ್ಪಿದ್ದ ಅವನನ್ನು ಕೈಕಾಲು ಕಟ್ಟಿಹಾಕಿ ಪೋಲೀಸಿನವರಿಗೆ ಹೇಳಿಕಳಿಸಿದರಂತೆ

ಪೋಲೀಸಿನವರು ಬಂದು ಈ "ಕದೀಮನನ್ನು ಎರಡು ವರ್ಷಗಳಿಂದ ಹಿಡಿಯಲು ಪ್ರಯತ್ನಿಸುತ್ತಿದ್ದೆವು ಎಂಟು ಬ್ಯಾಂಕುಗಳನ್ನು ಇವ ದರೋಡೆ ಮಾಡಿದ್ದಾನೆ. ಎರಡು ಟ್ರೆಜರಿಗಳನ್ನು ಲೂಟಿ ಮಾಡಿದ್ದಾರೆ. ಶುದ್ಧ ಸೈತಾನನ ಗೋತ್ರೋದ್ಭವ ಈತ. ಇವನನ್ನು ಹೇಗೆ ಹಿಡಿದಿರಿ?" ಎಂದರಂತೆ.

"ಸೋಮಣ್ಣ ಹಿಡಿದವನು" ಎಂದು ಸೋಮಣ್ಣನನ್ನು ತೋರಿಸಿದರಂತೆ. ಆ ವೇಳೆಗೆ ಅಲ್ಲಿ ಪೆಠಾರಿಯ ಹಿಂದೆ ಅವಿತುಕೊಂಡಿದ್ದ ಒಬ್ಬ ಪತ್ರಿಕಾ ಪ್ರತಿನಿಧಿ ಹೊರಗೆ ಬಂದು, "ಆ ಗುಂಡಿನ ಶಬ್ದ ಕೇಳಿ ನಾನು ನಿಯಮದ ಪ್ರಕಾರ ಪೆಠಾರಿಯ ಶರಣು ಹೊಡೆದೆ.' ಸೋಮಣ್ಣನವರು—ಸಾಹಸ ಸೋಮಣ್ಣನವರು ಯಾರು ಎಂದು ಅವರ ಫೋಟೋ ಹಿಡಿದನಂತೆ. ಮಾಸಲು ಮಾಸಲಾದ ಆ ಫೋಟೋ ಕೂಡ ಅಲ್ಲಿ ಹಾಕಲ್ಪಟ್ಟಿತ್ತು.

*  *  *

ಈಶ್ವರನ ಮಾಯೆ ಕಲಿಯುಗದಲ್ಲಿ ನಡೆಯುವುದಿಲ್ಲವಂತೆ. ಶುದ್ಧ ಸುಳ್ಳು. ಸೋಮಣ್ಣನ ಸಾಹಸ ಅಂತಹದೊಂದು. ಅವನನ್ನು ನೋಡಿ ಈ ವಿಷಯ ಕೇಳಲೇಬೇಕು ಎಂದು ಮಾರನೆಯ ದಿನ ಬ್ಯಾಂಕಿಗೆ ಹೋದೆ. ಅವನ ಕಿಟಕಿಯ ಹತ್ತಿರ ಸಂತೆ ಸೇರಿತ್ತು. ಆ ಕಾರ್ಯದರ್ಶಿಯ ಗಂಟೆಗೊಮ್ಮೆನ ಕಠಿಣೋಕ್ತಿ ಕೇಳಿಸಲೇ ಇಲ್ಲ. ಮೂರು ಗಂಟೆ ಕಾದ ನಂತರ ಕಿಟಕಿ ಖಾಲಿ ಆಯಿತು. ಅದನ್ನು ಮುಚ್ಚುವ ಹೊತ್ತಿಗೆ ಅಲ್ಲಿಗೆ ಹೋಗಿ "ಸೋಮಣ್ಣನವರೇ" ಎಂದೆ. "ಈ ಪತ್ರಿಕೆಯ ಸುದ್ದಿ" ಎಂದೆ.

ಆಗ ಆತನಂದ. "ಇಷ್ಟು ಜನರೂ ಅದನ್ನು ಕೇಳುವುದಕ್ಕೇ ಬಂದಿದ್ದರು ಈ ಕಿಟಕಿಯ ಹತ್ತಿರ. ನಿಮ್ಮನ್ನು ಆಗಲೇ ನೋಡಿದೆ. ಅವರಿಗ್ಯಾರಿಗೂ ನಿಜ ಹೇಳಲಿಲ್ಲ. ತಾಳ್ಮೆಯಿಂದ ಕಾದಿದ್ದಿರಿ ಅದಕ್ಕಾಗಿ ನಿಮಗೆ ಹೇಳುತ್ತೇನೆ."

ಆ ಖಾಂಧಾರಿಯ "ಹಣವನ್ನು ಕೊಡು" ಎಂಬ ಶಬ್ದ ಕೇಳಿದಾಗ ಆ ಕಾರ್ಯದರ್ಶಿ ಅವ ಎಂತಂದುಕೊಂಡೆ ಹಳೆಯ ತಡೆಯಲಾರದ ಕೋಪ ಬಂದು ಹಾಗೆ ಮಾಡಿದೆ ಅಷ್ಟೇ!" ಎಂದ.

ಯಾವ ಕಟಕಟೆಯ ಹುತ್ತದಲ್ಲಿ ಯಾವ ಹಾವು ಅಡಗಿರುತ್ತದೊ! ಅಲ್ಲವೇ!

—ಪ್ರಸಾದ್.

# ನೋಬೆಲ್ ಪಾರಿತೋಷಕ

ನಮ್ಮೂರಿನಲ್ಲಿ ಆಹಾರ ಸಾಕಷ್ಟಿಲ್ಲವಂತೆ— ರೇಷನ್ ಕಠಿಣವಂತೆ—ಇವರುಗಳಿಗೆ ಹೊಟ್ಟೆಗಿಲ್ಲವಂತೆ—ಇವರ ದೇಹ ನಶಿಸಿದೆಯಂತೆ—ಎಲ್ಲಾ ಶುದ್ಧ ಸುಳ್ಳು, ಅಂದರೆ—ಶುದ್ಧ ಸುಳ್ಳು.

ನಿನ್ನೆ ನೋಡಿ ಬಸವನಗುಡಿಗೆ ಹೋಗೋಣ ಅಂತ ಮಲ್ಲೇಶ್ವರದಲ್ಲಿ ಬಸ್ಸು ಹತ್ತುಕ್ಕೇ ಅಂತ ನಿಂತಿದ್ದೆ. ಬಸವನಗುಡೀಲಿ ಒಂದು ಮನೆ ಖಾಲಿ ಇದೆ ಅಂತ ಮಲ್ಲೇಶ್ವರಕ್ಕೆ ಮನೆ ಹುಡುಕಿಕೊಂಡು ಹೋದಾಗ ಹೇಳಿದರು. ಅದಕ್ಕೇ ಹೊರಟಿದ್ದೆ. ನಾಲ್ಕು ನಾಲ್ಕೂವರೆ ಗಂಟೆ ಸಾಯಂಕಾಲ. ಒಂದು ಬಸ್ಸು ಬಂತು.

ದಿಟವಾಗಲೂ ಹೇಳ್ತೀನಿ ಕೇಳಿ, ನಾನು ಒಂದು ಹೆಜ್ಜೇನೂ ನಾನಾಗಿಯೇ ಮುಂದಕ್ಕಿಡಲಿಲ್ಲ. ಹಿಂದು ಮುಂದೂ, ಆಜೂ ಬಾಜೂ, ಅವರು ಅನಾಮತ್ತು ನನ್ನ ಮುಂದು ಮುಂದಕ್ಕೆ ಬಸ್ಸಿನೊಳಕ್ಕೆ ಸಾಗಿಸಿದರು.

ಹಿಂದಿದ್ದವನು ಒಂದು ಮರದ ಹಲಗೆಯಿಂದ ನನ್ನ ಬೆನ್ನನ್ನು ಒತ್ತುತ್ತಿದ್ದ. ಪಕ್ಕದವನು ಒಂದು ಕಠಾರಿಯಿಂದ ತಿವಿಯುತ್ತಿದ್ದ. ಜ್ಞಾನ ತಪ್ಪದೇ ಇರಲಿ ಅಂತ ಸಂದು ಬಂದಾಗ ಚಿಟಿಕೆ ಹಾಕುಲ್ಲವೇ! ಹಾಗೆ. ಮುಂದಿನವನ ಪಾದ ನನ್ನ ಹೆಜ್ಜೆಯ ಮೇಲೆ ಇತ್ತು. ಅವನೂ ಸೈನ್ಯದ ಮೊಳೆ ಮೋಜು ಧರಿಸಿದ್ದಾಂತ ನನಗೆ ಖಂಡಿತ.

ಬಸ್ಸು ಸೇರಿದನಂತರ ಸ್ವಲ್ಪ ಉಸಿರು ಬಿಡೋಹಾಗಾಯಿತು. ಸುತ್ತಲೂ ಹುಡುಕಿದೆ ಆ ಮರದ ಹಲಗೆಯನ್ನು ಅದು ನನ್ನ ಹಿಂದಿದ್ದವನ ಹೊಟ್ಟೆ. ಅಷ್ಟು ಗಟ್ಟಿಯಾಗಿರಬೇಕಾದರೆ ತೋಳ ತಿಂದಹಾಗೆ ತಿಂದಿರಬೇಕಲ್ಲವೇ ಅವ. ಪಕ್ಕದವನ ಕಠಾರಿಯೆಲ್ಲಿ ಎಂದು ಹುಡುಕಿದೆ. ಕಠಾರಿಯೂ ಇಲ್ಲ, ಮಣ್ಣೂ ಇಲ್ಲ. ಅವನ ಮೊಳಕೈ ಗುದ್ದಿದ್ದು. ಕಬ್ಬಿಣದಂತಾಗಬೇಕಾದರೆ ಅವನ ಮೂಳೆ ಅವನು ಹೊಟ್ಟೆಗೆ ಏನು ತಿಂದಿರಬೇಕು—ಎಷ್ಟು ತಿಂದಿರಬೇಕು. ಮುಂದಿದ್ದವನ ಬೂಡ್ಸೆಲ್ಲಿ ಅಂತ ಹುಡುಕಿದೆ. ಬರೀ ಪಾದ. ಎಲವೋ! ಖೂಳ! ಇವನ ಪಾದಗಳಿಗೇ ಇಷ್ಟು ಕಠಿಣತೆ ಇದ್ದರೆ, ಇವನ ಹೃದಯ ಇನ್ನು ಹೇಗಿರಬೇಕು? ಇವನ ಮನಸ್ಸು!! ಏನಾದರೂ ನರಭಕ್ಷಕನೋ ಈತ ಎನ್ನಿಸಿತು.

ಅದಕ್ಕೇ ನಾನಂದಿದ್ದು—ನಮ್ಮೂರಿನವರಿಗೆ—ಅದರಲ್ಲೂ ಬಸ್ ಪ್ರಯಾಣೀಕರಿಗೆ ಆಹಾರ ಬಲು ಹೆಚ್ಚು—ರೇಷನ್ ಬಹಳ ಉದಾರ—ಇವರ ಆಹಾರ ಬಲು ಪುಷ್ಟಿಕರವಾದದ್ದು.

ಇವರುಗಳು ತಿನ್ನೋದೇನು ಎಂದು ಸಂಶೋಧನೆ ನಡೆಸಿದರೆ, ಮುಂದಿನ ವರ್ಷದ ನೋಬೆಲ್ ಪಾರಿತೋಷಕ ನಮ್ಮ ಊರಿನವರಿಗೇ ಖಂಡಿತ ಸಿಗುತ್ತೆ—ಅಂತ.

—ನೋಬೆಲ್ ವಿದ್ಯಾರ್ಥಿ.

# ಕೊರವಂಜಿ

ಬಳೇಪೇಟೆ : : ಬೆಂಗಳೂರು 2

**ಬಿಡಿ ಪ್ರತಿ ಕೇವಲ ನಾಲ್ಕಾಣೆ**

ವಾರ್ಷಿಕ ಚಂದಾ : 3 ರೂ.ಗಳು (ಅಂಚೆ ವೆಚ್ಚ ಸಹಿತ)


## ನಮ್ಮ ಮಾರಾಟಗಾರರು

| | | | |
|---|---|---|---|
| ಶ್ರೀ | ಶ್ರೀರಾಮ ನ್ಯೂಸ್ ಏಜನ್ಸಿ | – | ತಿಪಟೂರು |
| ,, | ವಿ. ಶ್ಯಾಮ ಐಂಗಾರ್ | – | ಮದ್ದೂರು |
| ,, | ಎಲ್. ಶೇಷಾದ್ರಿ | – | ಅರಸೀಕೆರೆ |
| ,, | ಎ. ಸೇತೂರಾಮಾಚಾರ್ | – | ಹೊಳೆನರಸೀಪುರ |
| ,, | ಟಿ. ಸಂಜೀವಯ್ಯ ಮತ್ತು ಮಕ್ಕಳು | | ತುಂಕೂರು |
| ,, | ಯಸ್. ಎನ್. ಶ್ರೀಕಂಠಯ್ಯ | – | ಶ್ರೀರಂಗಪಟ್ಟಣ |
| ,, | ಉಮೇಶರಾವ್ | – | ಸಾಗರ |
| ,, | ಡಿ. ವಿ. ರಾಮನ್ | – | ಚಾಮರಾಜನಗರ |
| ,, | ಮೋಹನಸಿಂಗ್ | – | ಕೋಲಾರ |
| ,, | ಜಿ. ಹನುಮಾನ್ ಸಿಂಗ್ | | ರಾಮನಗರ (ಕ್ಲೋಸ್‌ಪೇಟೆ) |
| ,, | ಪಿ ವಿ. ಶಾಮಣ್ಣ | – | ಚಿಕ್ಕಬಳ್ಳಾಪುರ |
| ,, | ಹೆಚ್. ವೆಂಕೋಬರಾವ್ | – | ಬೆಂಗಳೂರು ಸಿಟಿ |
| ,, | ಯಸ್. ಶ್ರೀಕಂಠಯ್ಯ | – | ಯಶವಂತಪುರ |
| ,, | ಸಿ. ಆರ್. ಕೃಷ್ಣಮೂರ್ತಿ | – | ಚೆನ್ನಪಟ್ಟಣ |
| ,, | ಎಸ್. ಎನ್ ಸೋಮಪುರ | – | ರಾಮದುರ್ಗ |
| ,, | ಎಂ. ಎಸ್. ಎನ್. ರಾವ್ | – | ಮಧುಗಿರಿ |
| ,, | ಎನ್. ಕೆ. ಮೂರ್ತಿ | – | ಶನಿವಾರ ಸಂ[illegible] |
| ,, | ಪುಟ್ಟಸ್ವಾಮಿ ಶೆಟ್ಟಿ | – | ಹಿ. ಏರ್‌ಕ್ರಾಫ್[illegible] |
| ,, | ಹಿಗಿನ್‌ಬೋತಾಂಸ್ | – | ರೈಲ್ವೆ ಸ್ಟಾ[illegible] ಪುಸ್ತಕಾಲಯಗಳ |
| ,, | ಅಲೆಕ್ಸಾಂಡರ್ ಡಿ. ಸಾ. | – | ಕಂಕನಡೆ ದ ಕ |
| ,, | ಯಸ್. ಪಿ. ಬ್ರಮ್ಮದೇವಯ್ಯ | – | ಸಾಲಿಗ್ರಾಮ |
| ,, | ಯಸ್. ಚಕ್ರಪಾಣಿ | – | ಕಾಡುಗೋ[illegible] |
| ,, | ಎನ್. ಗುರುರಾವ್ ಎಸ್. ದೇಶಪಾಂಡೆ | | ಬಿಜಾಪು[illegible] |
| ,, | ಗೋವಿಂದ ನಾಯಕ್ | – | ಉಡುಪಿ ದ. |
| ,, | ಡಿ. ಗಣಪತಿ ರಾನಡೆ | – | ಜೋಗ್-ಫಾಲ್ |
| ,, | ಹೊನ್ನಗಂಗಪ್ಪ | – | ನೊಣವಿನ[illegible] |
| ,, | ಜಿ. ಎಂ. ರಸಿಸಿ | – | ಬೈಲಹೊಂಗಲ |

(ಮುಂದುವರಿಯುವುದು)

REG. No M. 4718 KORAVANJI JAN. 1950




Printed by B S Iyengar Bangalore City
Publisher—B N Gupta Editor—M Shivaram